ಶ್ರೀ ಬಿ.ಎಸ್.ಯಡಿಯೂರಪ್ಪ :- ನಾನು ಈಗ ನನ್ನ ಮಾತನ್ನು ಮುಂದುವರೆಸಿದರೆ. ಮತ್ತೆ question hour ಮತ್ತು ಕುಡಿಯುವ ನೀರಿನ ಚರ್ಚೆಗೆ ನನ್ನ ಮಾತನ್ನು ಬ್ರೇಕ್ ಮಾಡಬೇಕಾಗುತ್ತದೆ.

ಅಧ್ಯಕ್ಷರು :- ಈಗ ತಾವು ಮಾತನಾಡಿ. ತಮ್ಮದು ಆದ ಮೇಲೆ ನಾನು ಪ್ರಶ್ನೋತ್ತರವನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ ;-ನಿಮ್ಮ ಮಾತು ಮುಗಿದ ಮೇಲೆ ಇತರ ಚರ್ಚೆಗಳನ್ನು ಮಾಡೋಣ. ಮಾನ್ಯ ವಿರೋಧ ಪಕ್ಷದ ನಾಯಕರ ಮಾತು ಮಧ್ಯೆ ಬ್ರೇಕ್ ಆದರೆ ಚೆನ್ನಾಗಿರುವುದಿಲ್ಲ. ಇದು ಸದನಕ್ಕೆ ಗೌರವ ತರುವುದಿಲ್ಲ. ದಯವಿಟ್ಟು ತಾವೇ ಮಾತನಾಡಿ.

ಅಧ್ಯಕ್ಷರು :- ಮಾನ್ಯ ಉಪ ಮುಖ್ಯಮಂತ್ರಿಗಳೇ. ಇನ್ನು ಮೇಲೆ ಕಡ್ಡಾಯವಾಗಿ ಮೊದಲ ಸಾಲಿನ ಮಂತ್ರಿಗಳಲ್ಲಿ ಒಬ್ಬರಾದರೂ ಇರಲೇಬೇಕು. ಪದೇ ಪದೇ ಇದೇ ರೀತಿಯಾದರೆ ನಾನು ಸದನ ನಡೆಸಲಿಕ್ಕೆ ಸಾಧ್ಯವಿಲ್ಲ. ಯಾರಾದರೊಬ್ಬರು ಕಡ್ಡಾಯವಾಗಿ ಇರಲೇಬೇಕು.

ಶ್ರೀ ಬಸವರಾಜ ಎಸ್.ರಾಯರೆಡ್ಡಿ ;- ಮಾನ್ಯ ವಿರೋಧ ಪಕ್ಷದ ನಾಯಕರು ಬೇಜಾರು ಮಾಡಿಕೊಳ್ಳದೆ ದಯಮಾಡಿ ತಮ್ಮ ಮಾತನ್ನು ಮುಂದುವರೆಸಬೇಕೆಂದು ನಾನು ತಮ್ಮಲ್ಲಿ ಕೋರುತ್ತೇನೆ. ಕೆಲವು ಶಾಸಕರು ಸಹಕಾರ ಸಂಘಗಳ ಚುನಾವಣೆ ಮತ್ತಿತರೆ ಕಾರಣಗಳಿಗೆಂದು ಹೋಗಿದ್ದಾರೆ ಗೊತ್ತಾಗಿದೆ.

ಶ್ರೀ ಬಿ.ಎಸ್.ಯಡಿಯೂರಪ್ಪ :- ನಿಮ್ಮ explanation ಅನ್ನು ಯಾರು ಕೇಳಿದರು?

ಶ್ರೀ ಬಸವರಾಜ ಎಸ್.ರಾಯರೆಡ್ಡಿ :- ದಯಮಾಡಿ ತಾವು ಆಯವ್ಯಯ ಮೇಲಿನ ತಮ್ಮ ಭಾಷಣವನ್ನು ಮುಂದುವರೆಸಬೇಕೆಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

2005–06ನೇ ಸಾಲಿನ ಆಯವ್ಯಯದ ಮೇಲಿನ ಚರ್ಚೆ(ಮುಂದುವರೆದುದು)

ಶ್ರೀ ಬಿ.ಎಸ್.ಯಡಿಯೂರಪ್ಪ :- ಮಾನ್ಯ ಅಧ್ಯಕ್ಷರೇ, ಯಾವಾಗ ಒಂದು ತತ್ವ, ನೀತಿ, ಸಿದ್ಧಾಂತ ಇಲ್ಲದೆ ಹೊಂದಾಣಿಕೆಗಳಾಗುತ್ತವೋ ಅಥವಾ ಅಪವಿತ್ರ ಮೈತ್ರಿಗಳಾಗುತ್ತವೋ. ಇದರ ಪರಿಣಾಮ ರಾಜ್ಯದ ಜನ ಅನುಭವಿಸಬೇಕಾಗಿದೆ. ಇವತ್ತೇನು ನಡೆಯಿತು ಸಾರ್, ಪ್ರತಿಪಕ್ಷದ ನಾಯಕನಾಗಿ ನಾನು ಆಯವ್ಯಯದ

ಮೇಲೆ ಚರ್ಚೆ ಪ್ರಾರಂಭ ಮಾಡಿದೆ. 2.30 ಗಂಟೆಗೆ ಬರಬೇಕೆಂದು ಹೇಳಿದ್ದರಿಂದ ನಾವೆಲ್ಲಾ 35–40 ಜನ ಇಲ್ಲಿ ಬಂದು ಕುಳಿತಿದ್ದೆವು. ಆಡಳಿತ ಪಕ್ಷದ 3–4 ಸದಸ್ಯರು ಮಾತ್ರ ಇದ್ದರು. ಮಂತ್ರಿಗಳು ಒಬ್ಬಿಬ್ಬರನ್ನು ಬಿಟ್ಟು ಬೇರೆ ಯಾರೂ ಇರಲಿಲ್ಲ. ಅಧಿಕಾರಿಗಳ ಗ್ಯಾಲರಿಯಲ್ಲಿ ಅಧಿಕಾರಿಗಳು ಇಲ್ಲ. ರಾಜ್ಯದ ಜನ ಇದನ್ನು ನೋಡುತ್ತಾರೆ. ಇದು reflect ಆಗುತ್ತದೆ. ಐದೂ ಕಾಲು ಅಥವಾ ಐದೂವರೆ ಕೋಟಿ ಜನ ಏನು ತಿಳಿದುಕೊಳ್ಳಬೇಕು. ಆ ಕಡೆಯವರು ಅಥವಾ ಈ ಕಡೆಯವರು ಅಂತಲ್ಲ. ನಿನ್ನೆ ರಾತ್ರಿ ಬಾಲಬ್ರೂಯಿಯಲ್ಲಿ ಘಟನೆಗಳಾದ ಮೇಲೆ, ಅಲ್ಲಿ ಭಿನ್ನಾಭಿಪ್ರಾಯಗಳು ಉಲ್ಬಣವಾಗಿ, ಇದು ಇಲ್ಲಿ ಈ ರೀತಿಯಾಗಿ ಪ್ರಕಟವಾಗುತ್ತಿದೆ ಎಂದು ನಾವು ತಿಳಿದುಕೊಳ್ಳಬೇಕೆ? ಅಥವಾ ಇವತ್ತು ಆಡಳಿತ ನಡೆಸಲಿಕ್ಕೆ ಇವರಿಗೆ ಆಸಕ್ತಿ ಇಲ್ಲವೆಂದು ನಾವು ತಿಳಿದುಕೊಳ್ಳಬೇಕೆ? ಅಥವಾ ಈ ಸದನದ ಕಾರ್ಯಕಲಾಪ ಬಿಟ್ಟು......... ಯಾರೋ ಕೆಲವು ಸದಸ್ಯರು ಬಾರದಿದ್ದರೆ, ಅವರನ್ನು question ಮಾಡಲಿಕ್ಕೆ ನನಗೇನೂ ಅಧಿಕಾರವಿಲ್ಲ. ಆದರೆ front benchನಲ್ಲಿ ಇರಬೇಕಾದಂತಹ ಕೆಲವು ಸಚಿವರುಗಳೂ ಸಹ ಬೇರೆ ಕೆಲಸ ಕಾರ್ಯಗಳಲ್ಲಿ ತೊಡಗಿರುತ್ತಾರೆ ಅನ್ನುವುದಾದರೆ, ಇದು ಅನಾರೋಗ್ಯದ ಲಕ್ಷಣ ಎಂದು ಮಾತ್ರ ನಾನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಬಹಳ ಸ್ಪಷ್ಟವಾಗಿ ಎಲ್ಲೋ ಒಂದು ಕಡೆ ಈ ಸರ್ಕಾರ ಬಹಳ ದಿನ ಉಳಿಯುವುದಿಲ್ಲ ಎನ್ನುವಂತಹ message ಅನ್ನು ನೀವು ಕೊಡುವುದರಿಂದ, ಅಧಿಕಾರಿಗಳೂ ಅವರ ಕೆಲಸ ಮಾಡುವುದಿಲ್ಲ. ಯಾರೂ ಅದರ ಜವಾಬ್ದಾರಿಯನ್ನು ತೆಗೆದುಕೊಳ್ಳುವುದಿಲ್ಲ. ಇದರ ದುಷ್ಪರಿಣಾಮಗಳನ್ನು ರಾಜ್ಯದ ಜನ ಎದುರಿಸಬೇಕಾಗುತ್ತದೆ. ಬರಗಾಲ, ಕುಡಿಯುವ ನೀರಿನ ಹಾಹಾಕಾರ. ವಿದ್ಯುತ್ ಕ್ಷಾಮ. ಅಭಿವೃದ್ಧಿ ಕಾರ್ಯ ಸ್ಥಗಿತವಾಗಿರುವಂತಾದ್ದು, ಕೃಷಿ ಕಾರ್ಮಿಕರಿಗೆ ಉದ್ಯೋಗ ಇಲ್ಲದಿರುವಂತಾದ್ದು, ನಿರುದ್ಯೋಗಿಗಳು ರಸ್ತೆಯಲ್ಲಿ ತಿರುಗುತ್ತಿರುವಂತಾದ್ದು ಇಂತಹ ದಾರುಣ ಪರಿಸ್ಥಿತಿ ಇರುವಂತಹ ಈ ಸಂದರ್ಭದಲ್ಲಿ ನಾವು ನೀವೆಲ್ಲಾ ಯಾವ ಮಟ್ಟಕ್ಕೆ ಚುನಾಯಿತ ಪ್ರತಿನಿಧಿಗಳಾಗಿ ಜವಾಬ್ದಾರಿಯಿಂದ ಇಲ್ಲಿ ಕೆಲಸ ಮಾಡಬೇಕಾಗಿತ್ತೋ. ಅದು ಆಗದೆ, ಏನೋ ಒಂದು ರೀತಿ ಉಸಿರು ಕಟ್ಟುವಂತಹ ಪರಿಸ್ಥಿತಿ ಇದೆ ಎನ್ನುವಂತಾದ್ದು ರಾಜ್ಯದ ಜನತೆಗೆ ಗೊತ್ತಾಗುವಂತಾದ್ದು ಸರಿಯಲ್ಲ. ಇಲ್ಲಿ ಆ ಪಕ್ಷ. ಈ ಪಕ್ಷ ಅಂತಲ್ಲ. ಇವತ್ತು ಈ message ಹೊರಗಡೆ ಹೋಗುವುದರಿಂದ ಯಾರು ಇವತ್ತು ನಾವು ಈ ಐದೂವರೆ ಕೋಟಿ ಜನ, ಈ ಶಾಸನ ಸಭೆಯಲ್ಲಿ 224 ಜನರನ್ನು ಸದಸ್ಯರೆಂದು ನಾವು ಚುನಾಯಿಸಿದ್ದೇವೆ. ನಾವು ನೆಮ್ಮದಿಯಿಂದ ಇರಬೇಕು. ನಮ್ಮ ಪರವಾಗಿ ಅವರು ಚರ್ಚೆ ಮಾಡುತ್ತಾರೆ.

ಪರಿಹಾರ ಹುಡುಕುತ್ತಾರೆ. ನಾವು ಕೊಟ್ಟಂತಹ ತೆರಿಗೆ ಹಣ ಸದ್ವಿನಿಯೋಗವಾಗುತ್ತದೆ. ಅದು ಅಭಿವೃದ್ಧಿ ಕಾರ್ಯಗಳಿಗೆ ಹರಿದು ಬರುತ್ತದೆ ಎನ್ನುವಂತಹ ಭಾವನೆಗಳನ್ನೇನು ಇಟ್ಟುಕೊಂಡಿರುತ್ತಾರೋ, ಅದಕ್ಕೆ ಧಕ್ಕೆ ಬರುವಂತಹ ಘಟನೆಗಳು ಮತ್ತೆ ಮತ್ತೆ ಮರುಕಳಿಸುವಂತಾದ್ದು ಯಾರಿಗೂ ಶೋಭೆ ತರುವಂತಾದ್ದಲ್ಲ. ನಾನು ಇಷ್ಟು ಮಾತ್ರ ಹೇಳಲಿಕ್ಕೆ ಇಚ್ಛೆ ಪಡುತ್ತೇನೆ. ತಾವೂ ಸಹ ಅನೇಕ ಬಾರಿ ವಿನಂತಿ ಮಾಡಿದ್ದೀರಿ. ಹೇಳಿದ್ದೀರಿ. ಅದೆಲ್ಲಾ 'ಗೋರ್ಕಲ್ಲ ಮೇಲೆ ಮಳೆ ಸುರಿದಂತೆ ಸರ್ವಜ್ಞ' ಎಂಬಂತೆ ಅದರ ಪರಿಣಾಮ ಯಾರ ಮೇಲೂ ಆಗುತ್ತಿಲ್ಲ. ರಾಜ್ಯದ ಜನರ ಪರವಾಗಿ ಮಾನ್ಯ ಹಣಕಾಸಿನ ಸಚಿವರಲ್ಲಿ ನನ್ನದೊಂದೇ ವಿನಂತಿ ಅಥವಾ ಒತ್ತಾಯ. ಇವತ್ತು ಅಧಿಕಾರ ವಿಕೇಂದ್ರೀಕರಣದ ವ್ಯವಸ್ಥೆಯಾದ ಮೇಲೆ ಗ್ರಾಮ ಪಂಚಾಯಿತಿಯಲ್ಲಿ ಮತ್ತೆ ಚುನಾವಣೆಯಾಗಿ ಹೊಸ ಸದಸ್ಯರು ಬಂದಿದ್ದಾರೆ. ಆ ಇದ್ದಂತಹ ಸದಸ್ಯರು ತಮ್ಮ ಆಡಳಿತ ಅವಧಿಯ ಕೊನೆಯ ದಿನಗಳಲ್ಲಿ ಅಭಿವೃದ್ಧಿ ಕಾರ್ಯಕ್ಕೆ ಬೇಕಾದಂತಹ ಅನುದಾನ ಎರಡೂವರೆ ಲಕ್ಷ ರೂಪಾಯಿಗಳು ಅಥವಾ ಐದು ಲಕ್ಷ ರೂಪಾಯಿಗಳು ಬಿಡುಗಡೆಯಾಗಿ, ಸಣ್ಣ ಪುಟ್ಟ ಜನರಿಗೆ ಕೊಟ್ಟಂತಹ ಭರವಸೆಗಳನ್ನು ಈಡೇರಿಸಬೇಕೆಂಬ ಆಸಕ್ತಿ ಇದ್ದಂತಹ ಕಾಲದಲ್ಲಿ. ನೀವು ಇದುವರೆಗೆ 2004–05ನೇ ಸಾಲಿಗೆ ಐದು ಲಕ್ಷ ರೂಪಾಯಿಗಳಲ್ಲಿ 83 ಸಾವಿರ ರೂಪಾಯಿಗಳ ಹಣವನ್ನು ಮಾತ್ರ ಇಡೀ ರಾಜ್ಯದಲ್ಲಿ ಅಭಿವೃದ್ಧಿ ಕಾರ್ಯಕ್ಕೆ ಬಿಡುಗಡೆ ಮಾಡಿದ್ದೀರಿ. 2003–04ರಲ್ಲಿ 80 ಸಾವಿರ ರೂಪಾಯಿಗಳನ್ನು ಮಾತ್ರ ಬಿಡುಗಡೆ ಮಾಡಿದ್ದೀರಿ. ಅಂದರೆ ನೀವ್ಯಾಕೆ ಭರವಸೆಗಳನ್ನು ಕೊಟ್ಟಿರಿ? ಬೇಲೂರು ಘೋಷಣೆ ಏನು? ಈ ವ್ಯವಸ್ಥೆ ತಿರುಗು–ಮುರುಗಾಗಿರುವಂತಹ ಈ ಸಂದರ್ಭದಲ್ಲಿ ನಾನು ಸರ್ಕಾರವನ್ನು ಒತ್ತಾಯ ಮಾಡುವಂತಾದ್ದು ಏನೆಂದರೆ. ದಯಮಾಡಿ KPTCL ಗೆ street light ಬಾಬತ್ತು ಆ ಗ್ರಾಮ ಪಂಚಾಯಿತಿ ಕಟ್ಟಬೇಕಾದ ಹಣಕ್ಕೆ ಪರ್ಯಾಯವಾಗಿ ಬೇರೆ ಯಾವುದಾದರೂ ವ್ಯವಸ್ಥೆಯನ್ನು ಮಾಡಿ. ಆದರೆ ಗ್ರಾಮ ಪಂಚಾಯಿತಿಗೆ ಕೊಡಬೇಕಾದ ಹಣದಲ್ಲಿ KPTCLಗೆ ಕೊಡಬೇಕಾದ ಹಣವನ್ನು ಮುರಿದುಕೊಳ್ಳುವುದರಿಂದ ಅದರಲ್ಲೂ ಅಭಿವೃದ್ಧಿ ಕಾರ್ಯಗಳಿಗೆಂದು ಗ್ರಾಮ ಪಂಚಾಯಿತಿಗೆ ಕೊಟ್ಟ ಐದು ಲಕ್ಷ ರೂಪಾಯಿಗಳಲ್ಲಿ ಇದನ್ನು ಮುರಿದುಕೊಳ್ಳುವುದರಿಂದ, ಗ್ರಾಮ ಪಂಚಾಯಿತಿಗಳು ಗೌರವಯುತವಾಗಿ ತನ್ನ ಕೆಲಸಗಳನ್ನು ನಿರ್ವಹಿಸಲಿಕ್ಕಾಗುವುದಿಲ್ಲ.

ಈ ಅಧಿಕಾರ ವಿಕೇಂದ್ರೀಕರಣ ವ್ಯವಸ್ಥೆ ಸರಿಯಾಗಿ ಜಾರಿಯಲ್ಲಿ ಬರುವುದಿಲ್ಲ. ಚುನಾಯಿತ ಪ್ರತಿನಿಧಿಗಳಿಗೆ ಯಾರಿಗೂ ಗೌರವ ಬರುವುದಿಲ್ಲ ಎನ್ನುವುದು ಮೊದಲನೇ

ಮಾತು. ಎರಡನೆಯ ಸನ್ಮಾನ್ಯ ಹಣಕಾಸಿನ ಸಚಿವರಲ್ಲಿ ವಿನಂತಿ ಮಾಡುತ್ತೇನೆ. ಹೋದ ವರ್ಷ 2003-04ನೇ ಸಾಲಿಗೆ ನೀವು ಬಿಡುಗಡೆ ಮಾಡಿರುವಂಥದ್ದು 80.000 ರೂಪಾಯಿ. ಐದು ಲಕ್ಷ ರೂಪಾಯಿ ಘೋಷಣೆಯಾಗಿತ್ತು. ಗ್ರಾಮ ಪಂಚಾಯಿತಿ ಬಗ್ಗೆ ನಾನು ಮಾತನಾಡುತ್ತಿದ್ದೇನೆ. ಅಭಿವೃದ್ಧಿ ಕಾರ್ಯಕ್ಕೆ 80.000 ಸನ್ಮಾನ್ಯ ಸಿಂಧ್ಯರವರು ಬಿಡುಗಡೆ ಮಾಡಿದ್ದರು. ಕೆಪಿಟಿಸಿಎಲ್‌ಗೆ ಕೊಟ್ಟಿರುವ ಮೊತ್ತ ನೀವು ಹೇಳಿದರೂ ಸಹ ಅದು 2.5 ಲಕ್ಷ ಎಂದು ಇಟ್ಟುಕೊಳ್ಳಿ. 10 ರಿಂದ 20.000 ಹೆಚ್ಚು ಕಡಿಮೆ ಆಗುತ್ತದೆ. ಇನ್ನು ಎರಡುವರೆ ಲಕ್ಷ ಹೋದ ವರ್ಷ ಅಭಿವೃದ್ಧಿ ಕಾರ್ಯಕ್ಕೆ ಬಿಡುಗಡೆ ಆಗಿ ಈ ವರ್ಷ ಈ ನಿಮಿಷದವರೆಗೆ ಒಂದು ಪಂಚಾಯಿತಿಗೆ ಬಿಡುಗಡೆ ಆಗಿರುವುದು 83.000 ರೂಪಾಯಿ ಮಾತ್ರ. ಉಳಿದಂತಹ ಸ್ವಲ್ಪ ಹಣ ಕೆಪಿಟಿಸಿಎಲ್‌ಗೆ ಅಡ್ಜಸ್ಟ್ ಮಾಡಿಕೊಂಡಿದ್ದೀರಿ. ಎಂದರೆ ಎರಡುವರೆ ಲಕ್ಷ ಇಟ್ಟುಕೊಳ್ಳಿ. ಆದರೆ ಇನ್ನು ಎರಡುವರೆ ಲಕ್ಷ ಬಿಡುಗಡೆ ಆಗಿಲ್ಲ. ಹೋದ ವರ್ಷದ ಸುಮಾರು ಎರಡುವರೆ ಲಕ್ಷ. ಈ ವರ್ಷದ ಎರಡುವರೆ ಲಕ್ಷ ಒಟ್ಟು ಐದು ಲಕ್ಷ ರೂಪಾಯಿಗಳು. ಹೇಗೂ ತಾವು ಸರ್ಪ್ಲಸ್ ಬಜೆಟ್ ಇದೆ ಎಂದು ಹೇಳುತ್ತೀರಿ. ಸೇವಿಂಗ್ಸ್ ಇದೆ ಎಂದು ಹೇಳುತ್ತೀರಿ. ಅನುಕೂಲ ಇದೆ ಎಂದು ಹೇಳುತ್ತೀರಿ. ಈ ಐದು ಲಕ್ಷ ಹೋದ ವರ್ಷದ್ದು ಎರಡುವರೆ ಲಕ್ಷ. ಈ ವರ್ಷದ್ದು ಎರಡುವರೆ ಲಕ್ಷ ಸೇರಿಸಿ ತಾವು ಮಾರ್ಚ್ ಒಳಗೆ ಹಣವನ್ನು ಬಿಡುಗಡೆ ಮಾಡಬೇಕು. ಇದು ಮೊದಲನೇ ಒತ್ತಾಯ. ಎರಡನೆಯದು ಕೆಪಿಟಿಸಿಎಲ್‌ಗೆ ಸ್ಟ್ರೀಟ್ ಲೈಟ್ ಬಾಬ್ತು ಕೊಡಬೇಕಾದ ಈ ಹಣಕ್ಕೆ ಮುಂದೆ ಬರುವ ದಿನಗಳಲ್ಲಿ ಆದರೂ ಪರ್ಯಾಯ ವ್ಯವಸ್ಥೆ ಏನು ಮಾಡಬೇಕು ಎನ್ನುವುದರ ಬಗ್ಗೆ ನಾವು ಯೋಚನೆ ಮಾಡದೆ ಇದ್ದರೆ ಬಹುಶಃ ಗ್ರಾಮ ಪಂಚಾಯಿತಿ ವ್ಯವಸ್ಥೆ ಸರಿಯಾಗಿ ನಡೆಯುವುದಿಲ್ಲ. ಇನ್ನೊಂದು ನಿಮಗೆ ಆಶ್ಚರ್ಯ ಮತ್ತು ಆಘಾತ ತರುವಂತಹ ಸಂಗತಿ ಎಂದರೆ. ನಿಮಗೆ ಆ ಕಾಪಿ ಕಳುಹಿಸಿಕೊಡುತ್ತೇನೆ. 16-3-05 ರಂದು ನಿರ್ದೇಶಕರು ಸರ್ಕಾರದ ಪದನಿಮಿತ್ತ ಉಪಕಾರ್ಯದರ್ಶಿ ಗ್ರಾಮ ಪಂಚಾಯಿತಿ ಇವರು ಒಂದು ಪತ್ರ ಕಳುಹಿಸಿದ್ದಾರೆ. ಇದರಲ್ಲಿ ಉಲ್ಲೇಖ ಪತ್ರದಲ್ಲಿ ಕೋರಿರುವಂತೆ ಗ್ರಾಮ ಪಂಚಾಯಿತಿಗಳ ಬಾಬ್ತು ಕೆಪಿಟಿಸಿಎಲ್‌ಗೆ ಸಂದಾಯ ಮಾಡಿರುವುದು ಈ ಕೆಳಕಂಡಂತಿದೆ. 2004-05ಕ್ಕೆ ವಿವಿಧ ಎಸ್ಕಾಂಗಳಿಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯಿಂದ 70 ಕೋಟಿ 52 ಲಕ್ಷ ಜಮಾ ಆಗಿದೆ.

ಅದೇ 2004-05ನೇ ಸಾಲಿನಲ್ಲಿ 11.8.04ಕ್ಕೆ 100 ಕೋಟಿ. ಕೆಪಿಟಿಸಿಎಲ್‌ಗೆ 100 ಕೋಟಿ ಜಮಾ ಆಗಿದೆ ಎಂದು ಪತ್ರ ಕಳುಹಿಸಿದ್ದಾರೆ. ಒಟ್ಟು 270.52 ಕೋಟಿ 2003-04ರಲ್ಲಿ 2004-05ನೇ ಸಾಲಿನಲ್ಲಿ ಕೆಪಿಟಿಸಿಎಲ್‌ಗೆ ಜಮಾ ಆಗಿದೆ.

ಅಭಿವೃದ್ಧಿಗೆ ನೀವು ಕೊಟ್ಟಿರುವುದು ಎಷ್ಟು? ಅಭಿವೃದ್ಧಿ ಕಾರ್ಯಕ್ಕೆ ನೀವು ಕೊಟ್ಟಿರುವುದು ಒಟ್ಟು 5651 ಪಂಚಾಯಿತಿ ಇದ್ದರೆ ಆವರೇಜ್ 80.000 ಲೆಕ್ಕ ಹಾಕಿಕೊಂಡರೂ ಸಹ ಅಭಿವೃದ್ಧಿ ಕಾರ್ಯಕ್ಕೆ ನೀವು ಕೊಟ್ಟಿರುವ ಹಣ 44 ಕೋಟಿ ರೂಪಾಯಿ ಆಗುತ್ತದೆ. ಅಭಿವೃದ್ಧಿ ಕಾರ್ಯಕ್ಕೆ 44 ಕೋಟಿ ಕೆಪಿಟಿಸಿಎಲ್‌ಗೆ ಜಮಾ ಆಗಿರುವ ಹಣ 270 ಕೋಟಿ ಹೇಗೆ ಸಾಧ್ಯ ಇದು? ಯಾರು ಅಧಿಕಾರಿಗಳು. ಯಾರಿಗೆ ಕೇಳಿ ಕೊಟ್ಟಿರಿ? ಕೆಪಿಟಿಸಿಎಲ್‌ಗೆ ಎಷ್ಟು ಬಾಕಿ ಕೊಡಬೇಕು ಇದು ಮೊದಲನೆಯದು. ಎರಡನೆಯದು ಅಭಿವೃದ್ಧಿ ಕಾರ್ಯಕ್ಕೆ ಕೊಟ್ಟ ಐದು ಪಟ್ಟು ಆರು ಪಟ್ಟು ಕೆಪಿಟಿಸಿಎಲ್‌ಗೆ ಜಮಾ ಆಗಿದೆ ಎಂದರೆ, ಇದು ಯಾರ ಪ್ರಭಾವ? ಈ ಅಂಕಿ ಅಂಶಗಳು ನಮಗೆ ಅರ್ಥವಾಗುತ್ತಿಲ್ಲ. ಇದು ಮೊದಲನೆಯದು. ಇದರ ಬಗ್ಗೆ ನೀವು ಉತ್ತರ ಕೊಡುವ ಕಾಲದಲ್ಲಿ ಹೋದ ವರ್ಷದ ಎರಡುವರೆ ಲಕ್ಷ ಮತ್ತು ಈ ವರ್ಷದ ಎರಡೂವರೆ ಲಕ್ಷ ಒಟ್ಟು ಐದು ಲಕ್ಷ ಮಾರ್ಚ ಒಳಗೆ ಗ್ರಾಮ ಪಂಚಾಯಿತಿಗಳಿಗೆ ಕೊಡುತ್ತೀರಿ ಇಲ್ಲ ಇದು ಮೊದಲನೆಯದು. ಎರಡನೆಯದು 2004–05ನೇ ಸಾಲಿನಲ್ಲಿ ಗ್ರಾಮ ಪಂಚಾಯಿತಿಗೆ ನಿಗದಿಪಡಿಸಿದ ಅನುದಾನ 282 ಕೋಟಿ 65 ಲಕ್ಷ. ಬಿಡುಗಡೆ ಮಾಡಿದ ಅನುದಾನ 188.40 ಕೋಟಿ. ಕೊರತೆ 94.25 ಕೋಟಿ ಎಂದರೆ. ಐದು ಲಕ್ಷದಂತೆ ಈ ಪಂಚಾಯಿತಿಗಳಿಗೆ 282 ಕೋಟಿ 65 ಲಕ್ಷ ಬಿಡುಗಡೆ ಮಾಡಬೇಕಾಗಿತ್ತು. ಕೊರತೆ ಆದುದು 94.25 ಕೋಟಿ. ನಿಮ್ಮ ಸರ್ಪ್ಲಸ್ ಬಜೆಟ್ ಇದ್ದೂ. ನೀವು ಉಳಿತಾಯ ತೋರಿಸುವ ಈ ಕಾಲದಲ್ಲಿ ಹಣ ಇದ್ದೂ ನೀವೇ ಭರವಸೆ ಕೊಟ್ಟಂತಹ ಹಣವನ್ನು. ಕಮಿಟ್‌ಮೆಂಟ್ ಇದ್ದಂತಹ ಹಣವನ್ನು ನೀವು ಏಕೆ ಬಿಡುಗಡೆ ಮಾಡಲಿಲ್ಲ? ಇದು ನನಗೆ ಈ ನಿಮಿಷದವರೆಗೆ ಅರ್ಥವಾಗಲಿಲ್ಲ. ಎರಡನೆಯದು ನೀವು ತೆಗೆದು ನೋಡಿ. ನಾನು ಅಂಕಿ ಅಂಶ ಕೊಟ್ಟು ನಿಮಗೆ ಗೊಂದಲದಲ್ಲಿ ಇಡುವುದಕ್ಕೆ ಇಷ್ಟ ಪಡುವುದಿಲ್ಲ. ನೀವು ಉತ್ತರ ಕೊಡುವಾಗ ಹೇಳಿ. ನೀವು ರಾಜ್ಯದ ಇತಿಹಾಸದಲ್ಲಿ ಮೊದಲನೇ ಬಾರಿಗೆ ಜಿಲ್ಲಾ ಪಂಚಾಯಿತಿಗಳಿಗೆ ಕೊಟ್ಟಿರುವಂತಹ ಅತ್ಯಂತ ಕಡಿಮೆ ಹಣ ಈ ರಾಜ್ಯದ ಯಾವುದೇ ಭಾಗದಲ್ಲಿ ಜಿಲ್ಲಾ ಪಂಚಾಯಿತಿಯಲ್ಲಿ ಕೆಲಸ ಆಗುತ್ತಿಲ್ಲ. ಗ್ರಾಮ ಪಂಚಾಯಿತಿಯಲ್ಲಿ ಕೆಲಸ ಆಗುತ್ತಿಲ್ಲ. ಪ್ರತಿ ಪಕ್ಷದ ಶಾಸಕರು 79 ಜನ ಇದ್ದಾರೆ. ಉಳಿದಂತಹ 10 ರಿಂದ 12 ಜನ ಇದ್ದಾರೆ. ಇವರು ತಲೆ ಎತ್ತಿ ಓಡಾಡುತ್ತಿದ್ದರು. ಹೇಗೂ ಆಡಳಿತ ಪಕ್ಷದವರು ಹೇಳಿದ ಹಾಗೆ ನಡೆಯುತ್ತದೆ ಎಂದು ಮಾಡುತ್ತಿದ್ದೀರಾ. ಅಥವಾ ಗ್ರಾಮ ಪಂಚಾಯಿತಿ ಅಸ್ತಿತ್ವದಲ್ಲಿ ಇರಬೇಕೆಂದು ನಿಮಗೆ ಇಷ್ಟ ಇದೆಯೋ ಇಲ್ಲ? ಇದು ನನಗೆ ಅರ್ಥವಾಗುತ್ತಿಲ್ಲ. ನೀವು ಉತ್ತರ ಕೊಡುವ ಕಾಲದಲ್ಲಿ ನನ್ನ ಹತ್ತಿರ ಅಂಕಿ ಅಂಶಗಳು

ಇವೆ. ನಿಮ್ಮ ಹತ್ತಿರವೂ ಇದೆ. ಜಿಲ್ಲಾ ಪಂಚಾಯಿತಿಗಳಿಗೆ ಬಜೆಟ್ ಆಲೋಕೇಷನ್ ಏನು ಇತ್ತು. ಎಷ್ಟು ಬಿಡುಗಡೆ ಮಾಡಿದ್ದೀರಿ. ಎಷ್ಟು ಖರ್ಚಾಗಿದೆ ಎಂಬುದನ್ನು ತಿಳಸಬೇಕು. ಬಹಳ ಮುಖ್ಯ ಎಂದರೆ, ಜಿಲ್ಲಾ ಉಸ್ತುವಾರಿ ಸಚಿವರು ಇಲ್ಲವೆಂದು ಮಂಜೂರಾದ ಅನುದಾನ ಅವರ ಅಧ್ಯಕ್ಷತೆಯಲ್ಲಿ ತೀರ್ಮಾನ ಆದ ಕೆಲವು ಯೋಜನೆಗಳಿಗೆ ಅವರು ಇಲ್ಲವೆಂದು ಕೆಲಸ ಪ್ರಾರಂಭವಾಗಿಲ್ಲ. ಮುಖ್ಯ ಕಾರ್ಯದರ್ಶಿಯವರಿಗೆ, ಡೆಪ್ಯುಟಿ ಕಮಿಷನರ್‌ರವರಿಗೆ ಮತ್ತು ಸಂಬಂಧಪಟ್ಟ ಅಧಿಕಾರಿಗಳಿಗೆ 100 ಬಾರಿ ಹೇಳಿದೆವು. ಜಿಲ್ಲಾ ಉಸ್ತುವಾರಿ ಸಚಿವರ ಅಗತ್ಯವಿಲ್ಲವೆಂದು ನಾವು ನೀವೂ ಹೇಳಬೇಕಾ? ಜಿಲ್ಲಾ ಉಸ್ತುವಾರಿ ಸಚಿವರ ಅಗತ್ಯವಿಲ್ಲವೆಂದು ಹೇಳುತ್ತೇವೆ. ಏಕೆ ಬೇಕು ಅವರು ನಮಗೆ ಮೇಟಿಗಳು. ಏನು ಮಾಡುವುದಕ್ಕೋಸ್ಕರ ಜಿಲ್ಲಾ ಉಸ್ತುವಾರಿ ಸಚಿವರಿಗೆ ನೇಮಕ ಮಾಡುತ್ತಿದ್ದೀರಿ? ನಾನು ಹೇಳುತ್ತೇನೆ. ಅಧಿಕಾರ ವಿಕೇಂದ್ರಿಕರಣದ ವ್ಯವಸ್ಥೆ ಯಶಸ್ವಿಯಾಗಿ ನಡೆಯಬೇಕೆಂದು ನಿಮಗೆ ಅಪೇಕ್ಷೆ ಇದ್ದರೆ ಜಿಲ್ಲಾ ಉಸ್ತುವಾರಿ ಸಚಿವರ ಕಲ್ಪನೆ ತೆಗೆದು ಹಾಕಿ. ನಮಗೆ ಅಗತ್ಯವಿಲ್ಲ. ಇಮ್ಮಿಡಿಯಟ್ಟಾಗಿ ತೀರ್ಮಾನ ತೆಗೆದುಕೊಳ್ಳಿ. ಸರ್ಕಾರಕ್ಕೆ ಒಳ್ಳೆಯ ಹೆಸರು ಬರಬೇಕೆಂದರೆ ಈ ತೀರ್ಮಾನ ತೆಗೆದುಕೊಂಡರೆ ಒಳ್ಳೆಯದಾಗುತ್ತದೆ. ಚುನಾಯಿತ ಪ್ರತಿನಿಧಿಗಳು ಗೌರವದಿಂದ ಕೆಲಸ ಮಾಡಬಹುದು. ಇದು ಮೊದಲನೆಯದು. ಎರಡನೆಯದು ನಿಮ್ಮ ಕೆಪಿಟಿಸಿಎಲ್‌ಗೆ ಸಂಬಂಧಪಟ್ಟ ಸಚಿವರು ಅಕಸ್ಮಾತ್ ಅನಿವಾರ್ಯ ಕಾರಣಗಳಿಂದ ಎಲ್ಲಾದರೂ ಹೋಗಿದ್ದರೆ ಬರಲಿ ಪರವಾಗಿಲ್ಲ. ನಿನ್ನೆ ನಾನು ಪ್ರಸ್ತಾಪ ಮಾಡಿದ್ದೆ. ವಾಟರ್ ಸಪ್ಲೈಗೆ ಕೆಇಬಿಗೆ ಕನೆಕ್ಷನ್ ಕೊಡಬೇಕೆಂದರೆ ಮಿನಿ ವಾಟರ್ ಸಪ್ಲೈಗೆ 50.000 ರೂಪಾಯಿ ಮತ್ತು ಪೈಪ್ಡ್ ವಾಟರ್ ಸಪ್ಲೈಗೆ ಒಂದು ಲಕ್ಷ ರೂಪಾಯಿ ಎಂದು ಜಿಲ್ಲಾ ಪಂಚಾಯಿತಿಗೆ ಮತ್ತು ತಾಲ್ಲೂಕು ಪಂಚಾಯಿತಿಗೆ ಹಣ ಜಮಾ ಮಾಡಬೇಕು. ಮೂಗಿಗಿಂತ ಮೂಗುತಿ ಭಾರ ಎನ್ನುವ ಹಾಗೆ ಈಗ ಸರ್ಕಾರೀ ಆಜ್ಞೆ ಆಗಿದೆ ಗೊತ್ತಾ? ಕೆಪಿಟಿಸಿಎಲ್‌ನವರಿಗೆ ಹೇಳುವವರು ಕೇಳುವವರು ಯಾರೂ ಇಲ್ಲ. ಅವರು ಒಂದು ಆದೇಶ ಹೊರಡಿಸಿದ್ದಾರೆ. ಈ ಯೋಜನೆಗಳಿಗೆ ಎಷ್ಟು ಖರ್ಚಾಗುತ್ತದೆ. ಅಷ್ಟೂ ಖರ್ಚನ್ನು ಗ್ರಾಮ ಪಂಚಾಯಿತಿಯವರು ಭರಿಸಬೇಕು. ಎರಡನೆಯದು, ಇವರಿಗೆ ಸೂಪರ್‌ವಿಷನ್ ಛಾರ್ಜ್ ಎಂದು 10 ಪರ್ಸೆಂಟ್ ಕೊಡಬೇಕು. ಎಲ್ಲಿ ಚರ್ಚೆ ಆಯಿತು. ಎಲ್ಲಿ ತೀರ್ಮಾನ ತೆಗೆದುಕೊಂಡಿರಿ. ಇದರ ದುಷ್ಪರಿಣಾಮ ಗ್ರಾಮ ಪಂಚಾಯಿತಿ ಮೇಲೆ ಏನು ಆಗಬಹುದು ಎಂದು ವಿವೇಚನೆ ಆದರೂ ನಿಮಗೆ ಇದೆಯಾ ಎಂದು ಇಲ್ಲಿರುವ ಪ್ರಶ್ನೆ. ತಾವು ಯೋಚನೆ ಮಾಡಿ ತೀರ್ಮಾನ ತೆಗೆದುಕೊಳ್ಳಿ. ದಯಮಾಡಿ ಈ ರೀತಿ ಈ ವ್ಯವಸ್ಥೆಯನ್ನು ಅಣಕು ಮಾಡುವ ಪ್ರಯತ್ನ ತಾವು ಮಾಡಬಾರದು

ಎಂದು ವಿನಯದಿಂದ ಪ್ರಾರ್ಥನೆ ಮಾಡುತ್ತೇನೆ. ಇನ್ನು ಗ್ರಾಮೀಣ ನೀರು ಸರಬರಾಜು ಬಗ್ಗೆ ಹೇಳಬೇಕೆಂದರೆ. 2004–05ರಲ್ಲಿ ತ್ವರಿತ ಗ್ರಾಮೀಣ ನೀರು ಸರಬರಾಜು ಯೋಜನೆಗೆ ನಿಗದಿ ಮಾಡಿದ ಹಣ 141–71 ಕೋಟಿ. ಖರ್ಚು ಮಾಡಿರುವುದು 47.64 ಕೋಟಿ. 31–2–2005ರವರೆಗೆ. ಅದಾದ ಮೇಲೆ ಇಲ್ಲಿರುವ ಯಾವುದೇ ಸದಸ್ಯ ಒಂದು ರೂಪಾಯಿ ಕೂಡ ಖರ್ಚು ಮಾಡಿಲ್ಲ. ನಾವು ಇಲ್ಲಿಯೇ ಇದ್ದೇವೆ. ಯಾರೋ ಖರ್ಚು ಮಾಡಿದ್ದಾರೆ ಎಂದು ಹೇಳುವುದಕ್ಕೆ ಬರುವುದಿಲ್ಲ. ನಮಗೆ ಗೊತ್ತಿಲ್ಲದೆ ಖರ್ಚು ಮಾಡುವುದಕ್ಕೆ ಸಾಧ್ಯವಿಲ್ಲ. ಖರ್ಚಾಗಿರುವುದು ಐದಾರು ಕೋಟಿ ಇರಬಹುದು. 141.71 ಲಕ್ಷದಲ್ಲಿ ಜನವರಿ 31 ರವರೆಗೆ ನಿಮ್ಮ ಅಧಿಕಾರಿಗಳು ಕೊಟ್ಟಿರುವ ಅಂಕಿ ಅಂಶಗಳ ಪ್ರಕಾರ 47.64 ಕೋಟಿ ಮಾತ್ರ ಖರ್ಚಾಗಿದೆ. ಇದು ತ್ವರಿತ ಗ್ರಾಮೀಣ ನೀರು ಸರಬರಾಜು ಯೋಜನೆಗೆ. ತ್ವರಿತ ಗ್ರಾಮೀಣ ನೀರು ಸರಬರಾಜು ಯೋಜನೆ ಅಡಿಯಲ್ಲಿ ಮರುಭೂಮಿ ಅಭಿವೃದ್ಧಿ ಯೋಜನೆಗೆ 15.59 ಕೋಟಿ ನಿಗದಿಯಾಗಿದ್ದರೆ ಖರ್ಚು ಆಗಿರುವುದು 6.11 ಕೋಟಿ ಮಾತ್ರ. ಪ್ರಧಾನ ಮಂತ್ರಿಗಳ ಘೋಷಣಾ ಯೋಜನೆ ಕುಡಿಯುವ ನೀರಿಗೆ ಅವರು ಕೊಟ್ಟಿರುವುದು 20.82 ಲಕ್ಷದಲ್ಲಿ ನೀವು ಖರ್ಚು ಮಾಡಿರುವುದು 9.72 ಲಕ್ಷ ಮಾತ್ರ. ಕುಡಿಯುವ ನೀರಿನ ಹಾಹಾಕಾರ ಇದೆ. ದುಡ್ಡು ಇಲ್ಲವೆಂದು ಬೊಬ್ಬೆ ಹೊಡೆಯುತ್ತಿದ್ದಾರೆ. ಇರುವ ದುಡ್ಡು ಖರ್ಚು ಮಾಡದೆ ಎಲ್ಲಿ ಇಟ್ಟಿದ್ದೀರಿ ಎಂದು ಹೇಳಿ. ಉಳಿತಾಯ ಬಜೆಟ್ ಎಂದು ಹೇಳುವುದಕ್ಕೆ ನಿಮಗ ನೈತಿಕ ಹಕ್ಕು ಏನು ಇದೆ ಎಂದು ನಿಮಗೆ ಕೇಳುವುದಕ್ಕೆ ಇಷ್ಟಪಡುತ್ತೇನೆ. ಕೊಟ್ಟ ಹಣ ಖರ್ಚು ಮಾಡದೆ, ನೀವೇ ನಿಗದಿ ಮಾಡಿದ ಹಣ ಖರ್ಚು ಮಾಡದೆ, ಕೇಂದ್ರ ಸರ್ಕಾರದಿಂದ ಬಂದ ಹಣ ಖರ್ಚು ಮಾಡಿಲ್ಲ. ನಾನು ನಿಮಗೆ ವಿನಂತಿ ಮಾಡುತ್ತೇನೆ. ಉಳಿದಂತಹ ನಮ್ಮ ಸ್ನೇಹಿತರು ನಾಳೆ ಚರ್ಚೆ ಮಾಡುವುದಕ್ಕೆ ಮುಂಚೆ, ಸನ್ಮಾನ್ಯ ಅಧ್ಯಕ್ಷರೆ. ಹಿಂದೆ ಬಣಕಾರ್‌ರವರು ಸಭಾಧ್ಯಕ್ಷರಾಗಿದ್ದ ಕಾಲದಲ್ಲಿ ಒಂದು ಹೊಸ ಪದ್ಧತಿ ಮಾಡಿದ್ದರು. ಅದು ಸಾಮಾನ್ಯವಾಗಿ ಗ್ರಾಮೀಣ ಪ್ರದೇಶಗಳಿಂದ ಬಂದಂತಹ ಶಾಸಕರಿಗೆ ಅನುಕೂಲ ಆಗಬೇಕೆಂದು ಮೂರು ತಿಂಗಳಿಗೊಮ್ಮೆ ಯಾವ ಯಾವ ಬಾಜಿನಲ್ಲಿ ಎಷ್ಟು ಮಂಜೂರಾಗಿತ್ತು. ಎಷ್ಟು ಖರ್ಚಾಗಿದೆ ಎಂದು ಅದರ ಪಟ್ಟಿ ತರಿಸಿ ಶಾಸಕರಿಗೆ ಕೊಟ್ಟು ನಮಗೆ ಎಜ್ಯುಕೇಟ್ ಮಾಡುವ ಪ್ರಯತ್ನ ಮಾಡುತ್ತಿದ್ದರು. ಈಗ ಕೊನೇ ಪಕ್ಷ ನಾನು ಸಿದ್ದರಾಮಯ್ಯನವರಿಗೆ ವಿನಂತಿ ಮಾಡುವುದು. ನಿಮಗೆ ಬೆಟ್ಟು ಮಾಡಿ ತೋರಿಸುವುದಕ್ಕೆ ನಾನು ಮಾತನಾಡುತ್ತಿಲ್ಲ. ನೀವು 2004–05ನೇ ಸಾಲಿನಲ್ಲಿ ಬಜೆಟ್‌ನಲ್ಲಿ ಏನು ಅನುದಾನ ಇಟ್ಟಿದ್ದೀರಿ. ಎಷ್ಟು ಖರ್ಚು ಮಾಡಿದ್ದೀರಿ. ಎಂದು ಮಾರ್ಚ್ 15 ರಿಂದ 20ನೇ ತಾರೀಕಿನವರೆಗೆ ಅದನ್ನು ಕೊಟ್ಟರೆ ನಿಮ್ಮ ಅಧಿಕಾರಿಗಳು

ನೀವು ಬಿಡುಗಡೆ ಮಾಡಿರುವ ಹಣವನ್ನು ಖರ್ಚು ಮಾಡದೆ ಬೇಜವಾಬ್ದಾರಿತನ ತೋರಿಸಿದ್ದಾರೆಂದು ಆಗುತ್ತದೆ. ಹಾಗಾದರೆ ಅಲ್ಲಿ ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿ ಮತ್ತು ಅಲ್ಲಿರುವಂತಹ ವ್ಯವಸ್ಥೆಗಳು ಕುಸಿದು ಹೋಗಿವೆ. ಏಕೆ ಮಾಡುತ್ತೀರಿ? ಸರ್ಕಾರಕ್ಕೆ ಒಳ್ಳೆಯ ಹೆಸರು ಬರಬೇಕೆಂದರೆ ಅಧಿಕಾರಿಗಳಿಂದ ಬರಬೇಕು. ಆಡಳಿತದಲ್ಲಿ ಯಾರಾದರೂ ಇರಬಹುದು. ಕೆಲಸ ಮಾಡುವುದಕ್ಕೆ ಆಗದೆ ಇರುವ ಉಸಿರು ಕಟ್ಟುವ ಪರಿಸ್ಥಿತಿ ಏನು? ಇದಕ್ಕೆ ಪ್ರಮುಖವಾದ ಕಾರಣ ಜಿಲ್ಲಾ ಉಸ್ತುವಾರಿ ಸಚಿವರು ಬಹಳ ಕಡೆ ಇಲ್ಲದೆ ಇರುವುದು. ಇದ್ದ ಕಡೆ ನೀವು ಅನುಭವದಿಂದ ಹೇಳಬೇಕು. ಇದು ಒಂದು ಪ್ರಮುಖವಾದ ಕಾರಣ. ಎರಡನೆಯದು ದುಡ್ಡು ಬಿಡುಗಡೆ ಆಗಿದ್ದು ಖರ್ಚು ಮಾಡುವ ಉತ್ಸಾಹ ಅಧಿಕಾರಿಗಳಿಗೆ ಇಲ್ಲ. ಅವರಿಗೆ ಏನೂ ಆಸಕ್ತಿ ಇಲ್ಲ. ಕಾರಣ ನನಗೆ ಏನು ಗೊತ್ತು? ನಮ್ಮಲ್ಲಿ ಬಹಳ ಒಳ್ಳೊಳ್ಳೆಯ ಅಧಿಕಾರಿಗಳು ಇದ್ದರು. ಈಗಲೂ ಇದ್ದಾರೆ. ಆದರೆ ಅವರು ಕೆಲಸ ಮಾಡುವುದಕ್ಕೆ ಆಗದೇ ಇರುವಂಥ ಭಯದ ವಾತಾವರಣ ಏಕೆ ಇದೆ ಎಂದು ನನಗೆ ಗೊತ್ತಿಲ್ಲ. ಇನ್ನು ಸ್ವಚ್ಛ ಗ್ರಾಮ ಯೋಜನೆ ಬಗ್ಗೆ ಹೇಳಬೇಕೆಂದರೆ. ಏಕೆ ಸ್ವಾಮಿ ಜನರ ಮೂಗಿಗೆ ತುಪ್ಪ ಹಾಕುವಂಥ ಕೆಲಸವನ್ನು ಮಾಡುತ್ತೀರಿ. ದಯಮಾಡಿ ನೀವು ಉತ್ತರ ಕೊಡುವಾಗ ಹೇಳಬೇಕು. 224 ಶಾಸಕರುಗಳಲ್ಲಿ ಪ್ರಶ್ನೆಯು ಇದೆಯೇ ಆಗಿದೆಯೆಂದು ನಾನು ತಿಳಿದುಕೊಂಡಿದ್ದೇನೆ. ಏಕೆಂದರೆ ಸ್ವಚ್ಛ ಗ್ರಾಮ ಯೋಜನೆಯಡಿಯಲ್ಲಿ ಪಬ್ಲಿಕ್ ಕಾಂಟ್ರಿಬ್ಯೂಷನ್ ಎಂದು ಒಂದು ಲಕ್ಷ ರೂ.ಗಳನ್ನು ಸಂಗ್ರಹ ಮಾಡಿ ಒಂದು ಗ್ರಾಮಕ್ಕೆ ಹತ್ತು ಲಕ್ಷ ರೂ.ಗಳು ಎಂದು ನೀವು ತೆಗೆದುಕೊಂಡ ಮೇಲೂ ಕೂಡ ದುಡ್ಡು ಬಿಡುಗಡೆಯಾಗಿದೆಯೋ ಅಥವಾ ಇಲ್ಲವೋ ನನಗೆ ಗೊತ್ತಿಲ್ಲ ಸ್ವಾಮಿ ಕೆಲಸವಂತೂ ಎಲ್ಲೂ ಪ್ರಾರಂಭವಾಗಿಲ್ಲ. ಎಲ್ಲಾದರೂ ಆಗಿದ್ದರೆ ಪ್ರಾರಂಭವಾಗಿ ಕೆಲಸ ಮುಗಿದಿದೆ ಯಡಿಯೂರಪ್ಪನವರೆ ಎಂದು ಇಲ್ಲಿರುವಂಥ 224 ಶಾಸಕರಲ್ಲಿ ಯಾರಾದರೂ ಹೇಳಿದರೆ ನಾನು ತಿಳಿದುಕೊಳ್ಳುತ್ತೇನೆ. ಒಂದು ವೇಳೆ ಆಗಿದ್ದರೂ ಒಂದೆರಡು ಮೂರು ಕ್ಷೇತ್ರಗಳಲ್ಲಿ ಆಗಿರಬಹುದೇನೋ. ಆದರೆ ನನ್ನ ಪ್ರಕಾರ ಈ ರಾಜ್ಯದ ಎಲ್ಲೂ ಕೂಡ ಸ್ವಚ್ಛ ಗ್ರಾಮ ಯೋಜನೆಯಡಿಯಲ್ಲಿ ಈ ಕಡೆ ಕುಳಿತಿರುವ ಒಂದು ನೂರು ಶಾಸಕರಲ್ಲಿ ಕೆಲಸವಾಗಿದೆಯೆಂದು ಯಾರೂ ಹೇಳುವುದಿಲ್ಲ. ಆಡಳಿತ ಪಕ್ಷದ ಕಡೆಯ ಶಾಸಕರುಗಳ ಕ್ಷೇತ್ರದಲ್ಲಿ ಆಗಿರಬಹುದೇನೋ. ಅದು ನನಗೆ ಗೊತ್ತಿಲ್ಲ. ಆಗಿದ್ದರೆ ಆಮೇಲೆ ಹೇಳಲಿ.

ಡಾ:ವೈ. ನಾಗಪ್ಪ ;– ಆಡಳಿತ ಪಕ್ಷದ ಶಾಸಕರುಗಳ ಕ್ಷೇತ್ರಕ್ಕೆ ಮಾತ್ರ ಆ ಯೋಜನೆ ಎಂದು ಇಲ್ಲ. ಎಲ್ಲಾ ಶಾಸಕರುಗಳ ಕ್ಷೇತ್ರದಲ್ಲೂ ಆ ಯೋಜನೆ ಉಂಟು.

ಶ್ರೀ ಬಿ.ಎಸ್. ಯಡಿಯೂರಪ್ಪ :- ಹಾಗಾದರೆ ನಾನು ಹೇಳುತ್ತೇನೆ ಕೇಳಿ. ಶಿವಮೊಗ್ಗ ಜಿಲ್ಲೆಯಲ್ಲಿ ನಾವು 67 ಗ್ರಾಮಗಳನ್ನು ಈ ಯೋಜನೆಯಲ್ಲಿ ಆಯ್ಕೆ ಮಾಡಿದ್ದೇವೆ. ಪ್ರತಿಯೊಂದು ಗ್ರಾಮದ್ದು ಒಂದೊಂದು ಲಕ್ಷ ರೂಪಾಯಿಗಳ ಕಾಂಟ್ರಿಬ್ಯೂಶನ್‌ನಲ್ಲಿ ಕಟ್ಟಲಾಗಿದೆ. ನೀವು ಬೇಕಾದರೆ ಈಗಲೇ ಫೋನ್ ಮಾಡಿ ಈ ಬಗ್ಗೆ ರಿಪೋರ್ಟ ತರಿಸಿಕೊಳ್ಳಿ. ಯಾವುದಾದರೂ ಒಂದು ಗ್ರಾಮದಲ್ಲಿ ಈ ಸ್ವಚ್ಛ ಗ್ರಾಮಾ ಯೋಜನೆಯಲ್ಲಿ ಕೆಲಸವಾಗಿದೆ ಎಂದು ಇದ್ದರೆ I will withdraw all my charges. ಮೊನ್ನೆ ನಾನು ಶಿವಮೊಗ್ಗಕ್ಕೆ ಹೋಗಿ ಅಲ್ಲಿ ಕುಳಿತುಕೊಂಡು ಬೇರೆ ಬೇರೆ ಜಿಲ್ಲೆಗಳಿಂದ ವರದಿಗಳನ್ನು ನಾನೊಬ್ಬ ವಿರೋಧ ಪಕ್ಷದ ನಾಯಕನಾಗಿ ತರಿಸಿಕೊಂಡು ನೋಡಿರುವುದರಿಂದ ನಾನು ಇಲ್ಲಿ ಜವಾಬ್ದಾರಿಯಿಂದ ಈ ಮಾತನ್ನು ಈಗ ಹೇಳುತ್ತಿದ್ದೇನೆ. ಉತ್ತರ ಕೊಡತಕ್ಕಂಥ ಕಾಲದಲ್ಲಿ ಇದಕ್ಕೆ ಕಾರಣವೇನು ಎನ್ನುವುದನ್ನು ತಿಳಿಸಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಇದು ಗ್ರಾಮೀಣ ಅಭಿವೃದ್ಧಿ ಕುಡಿಯುವ ನೀರಿನ ಯೋಜನೆ ಪರಿಸ್ಥಿತಿಯಾಗಿದೆ. ಇನ್ನು ಪ್ರಧಾನ ಮಂತ್ರಿಗಳ ಗ್ರಾಮ ಸಡಕ್ ಯೋಜನೆ ಬಗ್ಗೆ ಹೇಳಬಯಸುತ್ತೇನೆ. ನಮ್ಮೆಲ್ಲ ಶಾಸಕರುಗಳ ಕಣ್ತೆರೆಸಬೇಕಾಗಿರುವಂಥ ಒಂದು ಅಂಕಿ ಅಂಶ ಇಲ್ಲಿ ಹೇಳುವುದೇನೆಂದರೆ ಇದು 2000–2001ನೇ ಸಾಲಿನಿಂದ ಕೇಂದ್ರ ಸರ್ಕಾರ ಪ್ರತಿ ಲೀಟರ್‌ಗೆ ಗ್ರಾಹಕರ ಮೇಲೆ ಡೀಸೆಲ್ ಹಾಗೂ ಪೆಟ್ರೋಲ್ ಮೇಲೆ ಸೆಸ್ ಹಾಕಿ ವಸೂಲಿ ಮಾಡಿ ಬಂದಿರುವ ಹಣವನ್ನು ಈ ಯೋಜನೆಗೆ ಕೊಡುತ್ತಿದ್ದಾರೆ. ಇದರ ಕರ್ಮಕಥೆ ಏನು ಎಂಬುದನ್ನು ಹೇಳುತ್ತೇನೆ.

ಶ್ರೀ ಸಿದ್ದರಾಮಯ್ಯ:- ಮಾನ್ಯ ಯಡಿಯೂರಪ್ಪನವರೆ. ನಾನು ವಿಧಾನ ಪರಿಷತ್‌ಗೆ ಹೋಗಬೇಕಾಗಿದೆ. ತಾವು ಮಾತನಾಡಿ ನಮ್ಮವರು ನೋಟ್ ಮಾಡಿಕೊಳ್ಳುತ್ತಾರೆ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಪರವಾಗಿಲ್ಲ ತಾವು ಹೋಗಿ ಸಾರ್. ನೀವು ಇಲ್ಲವೇ ಇದ್ದರೂ ಮಾತನಾಡುತ್ತೇನೆ. ಈಗೇನಾಗಿದೆ ದುರದೃಷ್ಟವಶಾತ್, ಸಿದ್ದರಾಮಯ್ಯನವರು. ಪಿ.ಜಿ.ಆರ್. ಸಿಂಧ್ಯಾರವರು. ಎಂ.ಪಿ. ಪ್ರಕಾಶ್‌ರವರುಗಳು ಇವೊತ್ತು ಅವರುಗಳು ಮಾಡಿದ ಪಾಪದ ಕೊಡವನ್ನು ಹೊತ್ತುಕೊಂಡು ಅವರ ಪರವಾಗಿಯೇ ಮಾತನಾಡುವ ಪರಿಸ್ಥಿತಿ ಬಂದಿದೆ. ಏನು ಕರ್ಮ ನೋಡಿ ನಿಮ್ಮ ಮೂರು ಜನರದ್ದು.

ಶ್ರೀ ವಾಟಾಳ್ ನಾಗರಾಜ್:- ಏನು ಯಡಿಯೂರಪ್ಪನವರೆ. ಅವರುಗಳು ಮಂತ್ರಿಗಳಾಗಿರುವುದು ನಿಮಗೆ ಇಷ್ಟವಿಲ್ಲವೆ? ಏನೋ ಮಂತ್ರಿಗಳಾಗಿ ಗಂಭೀರವಾಗಿ

ಇದ್ದಾರೆ. ನೀವೇನೋ ಅವರಿಗೆ ಮಾಡಬೇಕು ಎಂದು ಹೊರಟಿರುವಂತಿದೆ. ಸಿಂಧ್ಯಾರವರೆ ನೀವು ಇವರ ಮಾತನ್ನು ಕೇಳುವುದಕ್ಕೆ ಹೋಗಬೇಡಿ. ಆಮೇಲೆ ಕೇಳಿಕೆಟ್ಟಿರಿ ನೋಡಿ.

ಶ್ರೀ ಬಿ.ಎಸ್.ಯಡಿಯೂರಪ್ಪ:- ನಾನು ಹೇಳುತ್ತೇನೆ. ಇವೊತ್ತು ಬೆಳಿಗ್ಗೆ ಕೂಡ ಪಿ.ಜಿ.ಆರ್. ಸಿಂಧ್ಯಾರವರು ಇಲ್ಲದೇ ಇದ್ದಿದ್ದರೆ ನಿನ್ನೆ ನಡೆದಂಥ ಘಟನೆಯ ಹಿನ್ನಲೆಯಲ್ಲಿ ಬೆತ್ತಲೆ ಆಗಿಬಿಡುತ್ತಿತ್ತು ಸರ್ಕಾರ. ಆಡಳಿತ ಪಕ್ಷದವರೆ ಮರೆಯಲ್ಲಿ ಹೋಗಿ ಕುಳಿತುಕೊಳ್ಳುವಾಗ ಇವರು ಏಕೆ ಓಡಿಬಂದು ಮುಂದೆ ಕುಳಿತುಕೊಳ್ಳಬೇಕಪ್ಪಾ?

ಶ್ರೀ ವಾಟಾಳ್ ನಾಗರಾಜ್:- ಅವರು ಮೂರು ಜನರು ಒಂದಾಗಿದ್ದಾರೆ. ಸಿದ್ಧರಾಮಯ್ಯನವರು. ಪ್ರಕಾಶ್‌ರವರು ಹಾಗೂ ಸಿಂಧ್ಯಾರವರದ್ದು ಅವರ ಪಕ್ಷದಲ್ಲಿ ಇವರದ್ದೇ ಒಂದು ಗುಂಪಾಗಿದೆ. ತಪ್ಪೇನಿಲ್ಲ. ಅದರ ಬಗ್ಗೆ ನಾವೇನೂ ಚಿಂತೆ ಪಡಬೇಕಾಗಿಲ್ಲ. ಅದು ವ್ಯವಸ್ಥಿತವಾಗಿ ನಡೆಯುತ್ತಿದೆ. ಅದು ಹಾಗೆ ನಡೆಯಲಿ. ಅದಕ್ಕೆ ಸಹಕಾರವನ್ನು ನಾವು ಕೊಡೋಣ. ಏಕೆಂದರೆ ಅವರು ಪ್ರಾಮಾಣಿಕವಾಗಿ ಆ ಕೆಲಸವನ್ನು ಅವರು ಮಾಡುತ್ತಿದ್ದಾರೆ. ಅದನ್ನು, ನನಗೆ ಸಂತೋಷವಾಗುತ್ತಿದೆ. ಅವರು ಆ ರೀತಿಯಲ್ಲಿ ಇರುವುದು ಒಳ್ಳೆಯದಲ್ಲವೇ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ; ಸಿಂಧ್ಯಾರವರೆ. ಇದಕ್ಕೇನು ಉತ್ತರ ಹೇಳುತ್ತೀರಿ. ನಿಮ್ಮ ಮೂರು ಜನರದ್ದು ಒಂದು ಪಾರ್ಟಿ ಎಂದು ಹೇಳುತ್ತಿದ್ದಾರೆ. ನೀವು ಇದಕ್ಕೆ ಉತ್ತರ ಹೇಳದಿದ್ದರೆ ನಿಜ ಎಂದೇ ನಾವು ತಿಳಿದುಕೊಳ್ಳಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ :- ಅವರು ಸುಮ್ಮನೇ ಕುಳಿತಿರುವುದೇ ಅದಕ್ಕೆ ಉತ್ತರ. ಹೀಗಿರುವಾಗ ಮತ್ತೆ ನೀವು ಅವರಿಗೆ ಹೇಳಿ, ಹೇಳಿ ಎಂದು ಕೇಳುತ್ತಿದ್ದೀರಿ. ನೀವು ಗಂಭೀರವಾಗಿ ಕುಳಿತುಕೊಳ್ಳಿ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೆ. ದಿನಾಂಕ 16-03-2005 ಬಿ.ಆರ್. ಪಾಟೀಲ್‌ರವರು ಕೇಳಿರುವ ಪ್ರಶ್ನೆಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಕೊಟ್ಟಿರುವ ಉತ್ತರವೇನೆಂದರೆ ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯಡಿಯಲ್ಲಿ ಮೂರನೇ ಹಂತದ ಯೋಜನೆಯಡಿಯಲ್ಲಿ ನಿಗಧಿಯಾದಂಥ ಹಣ 118 ಕೋಟಿ 41 ಲಕ್ಷ ರೂಪಾಯಿಗಳು ಎಂದಿದ್ದಾರೆ. ಆದರೆ ಇದರಲ್ಲಿ 20 ಕೋಟಿ 50 ಲಕ್ಷ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಿರುವುದು. ಈ ಉತ್ತರವನ್ನು ಮಾನ್ಯ ಸಚಿವರೇ ಕೊಟ್ಟಿದ್ದಾರೆ. ಇನ್ನೂ ಬಹಳ ಮಜಾ ಇದೆ ನೋಡಿ. ನಾಲ್ಕನೇ ಹಂತದಲ್ಲಿ 200 ಕೋಟಿ 62 ಲಕ್ಷ

ರೂಪಾಯಿಗಳ ಪ್ರಸ್ತಾವನೆಯಲ್ಲಿ ಒಂದು ಪೈಸೆಯನ್ನೂ ಖರ್ಚು ಮಾಡಿಲ್ಲ. ಈ ಉತ್ತರವನ್ನು ನಾನು ಹೇಳುತ್ತಿಲ್ಲ. ಮಾನ್ಯ ಸಚಿವರೇ ಕೊಟ್ಟಿರುವ ಉತ್ತರವಿದು. ಇದಕ್ಕೆ ಕಾರಣ ಏನು ಸ್ವಾಮಿ? ಏನಾಗಿದೆ ಇವರಿಗೆ ಧಾಡಿ. ನಿಮ್ಮ ಸಮಸ್ಯೆ ಏನು ಎಂಬುದೇ ನಮಗೆ ಅರ್ಥವಾಗುತ್ತಿಲ್ಲ. ಅಂದರೆ ಈ ಯೋಜನೆಯನ್ನು ಕಾರ್ಯರೂಪಕ್ಕೆ ತಂದು ಅಭಿವೃದ್ಧಿ ಆಗುವಂಥದ್ದು ನಿಮಗೆ ಇಷ್ಟವಿಲ್ಲವೇ? ಇದಕ್ಕೆ ಯಾರು ಜವಾಬ್ದಾರರು ಯಾರ ಮೇಲೆ ನೀವು ಕ್ರಮ ತೆಗೆದುಕೊಳ್ಳುತ್ತೀರಿ? ಗ್ರಾಮೀಣಾಭಿವೃದ್ಧಿ ದೃಷ್ಟಿಯಿಂದ ನಿಮ್ಮ ಸರ್ಕಾರ ಬದುಕಿದೆಯೇ ಎನ್ನುವ ಬಗ್ಗೆ ತಾವು ಯೋಚನೆ ಮಾಡುತ್ತಿದ್ದೀರಾ? ಪಾಪ ಮಹದೇವ ಪ್ರಸಾದ್‌ರವರು ಹಿಂದೆ ಆರೋಗ್ಯ ಸಚಿವರಾಗಿ ಚೆನ್ನಾಗಿ ಕೆಲಸ ಮಾಡುತ್ತಿದ್ದರು. ಅಂಥವರನ್ನು ಗ್ರಾಮೀಣಾಭಿವೃದ್ಧಿ ಇಲಾಖೆಗೆ ಮಂತ್ರಿ ಮಾಡಿ ಸಿಕ್ಕಿಸಿ ಏಕೆ ಗೋಳಾಡಿಸುತ್ತಿದ್ದೀರೋ ನನಗಂತೂ ಅರ್ಥವಾಗುತ್ತಿಲ್ಲ. ಇನ್ನು ಎರಡನೆಯದಾಗಿ ಇಲ್ಲಿಯೇ ಒಂದು ಪತ್ರ ಇದೆ ಮಹದೇವಪ್ಪನವರೆ. 19ನೇ ಜೂನ್ 2003ರ ಪತ್ರದಲ್ಲಿ ಏನಿದೆಯೆಂದರೆ preparation of Annual Proposals for PMGSY for 2004–05. ಇದನ್ನು ಕರ್ನಾಟಕ ಸರ್ಕಾರದ ಸಚಿವಾಲಯದಿಂದ ರೂರಲ್ ಡೆವಲಪ್‌ಮೆಂಟ್ ಪಂಚಾಯತ್ ರಾಜ್‌ಗೆ ಚೀಫ್ ಇಂಜಿನಿಯರ್‌ರವರಿಗೆ ಬರೆದಿರುವ ಲೆಟರ್ ಆಗಿದೆ. ಏನು ಬರೆಯಲಾಗಿದೆ ಎಂದರೆ,

Please find herein enclosed the above cited letter received from the Joint Secretary. Government of India indicating the time schedule for various activities for submission of PMGSY for 2004-05 amounting to Rs. 95 crores which is the annual allocation for Karnataka.

I am directed to request you to take necessary action in the matter duly authorising.... the activities prescribed by the Government of India.

ಈ ಪತ್ರವನ್ನು 95 ಕೋಟಿ ರೂಪಾಯಿಗಳಿಗೆ ಸಂಬಂಧಪಟ್ಟಂತೆ ದಿನಾಂಕ 19ನೇ ಜೂನ್ 2003 ರಂದು ಬರೆದಿರುವುದಾಗಿದೆ. ಇನ್ನು ಎರಡನೆಯ ಪತ್ರ ಭಾರತ ಸರ್ಕಾರದಿಂದ ಬಂದಿರುವಂಥದ್ದು. ಇದು 110 ಕೋಟಿ 7 ಲಕ್ಷ ರೂಪಾಯಿಗಳಿಗೆ ಸಂಬಂಧಪಟ್ಟಂಥದ್ದು. ಭಾರತ ಸರ್ಕಾರದ ಗ್ರಾಮೀಣಾಭಿವೃದ್ಧಿ ಇಲಾಖೆಯ ಮಂತ್ರಿ ಸಚಿವಾಲಯದಿಂದ ಬಂದಿದೆ. ಅವರು ಏನು ಹೇಳುತ್ತಾರೆ

ಎಂದರೆ

Please refer your letter dated 13.4.2003 dated 16.12 .2003 enclosing additional proposal valued at Rs. 116.07 crores for the current year,

you may also take necessary action for completing the associated standard requirements like upgrading the website ATR reports. Immediate action may be taken so that these proposals could be cleared during the current year itself ಎಂದು ಪತ್ರ ಬರೆಯುತ್ತಾರೆ. ಆದರೆ ಈ ನಿಮಿಷದವರೆಗೆ ತಾವು ಈ 95 ಕೋಟಿ ರೂಪಾಯಿಗಳಿಗೆ ಹಾಗೂ 116 ಕೋಟಿ 7 ಲಕ್ಷ ರೂಪಾಯಿಗಳಿಗೆ ಬೇಕಾದ ಪ್ರಪೋಸಲ್‌ನ್ನು ಕಳುಹಿಸಿಲ್ಲ. ಕೆಲಸ ಪ್ರಾರಂಭವಾಗಿಲ್ಲ. ಭಾರತ ಸರ್ಕಾರಕ್ಕೆ ಹೋಗಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ:– ಯಾವುದರದ್ದು ಪ್ರಪೋಸಲ್

ಶ್ರೀ ಬಿ.ಎಸ್.ಯಡಿಯೂರಪ್ಪ :– ಅದೇ ಪ್ರಧಾನ ಮಂತ್ರಿಗಳ ಗ್ರಾಮ ಸಡಕ್ ಯೋಜನೆಗೆ ಸಂಬಂಧಪಟ್ಟಂತೆ ಅಡಿಶನಲ್ ಆಗಿ ಇದ್ದಂಥ ಲೆಟರ್. ಆ ಲೆಟರ್‌ಅನ್ನು ತಮಗೆ ಕಳುಹಿಸಿಕೊಡುತ್ತೇನೆ.

ಡಾ:ಹೆಚ್.ಸಿ. ಮಹದೇವಪ್ಪ:– ಪ್ರಪೋಸಲ್ ಕಳುಹಿಸಲಾಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ ;– ಕಳುಹಿಸಿದ್ದರೆ ದುಡ್ಡು ಬಂದು ಮಾರ್ಚ ಒಳಗೆ ಖರ್ಚು ಆಗಬೇಕಾಗಿತ್ತು. ಇನ್ನು ಕೇವಲ 15.20 ದಿವಸಗಳು ಮಾತ್ರ ಉಳಿದಿದೆ. ರಿಮೈಂಡರ್ ಕಳುಹಿಸುವುದು ಯಾವತ್ತು. ಅವರು ನಿಮಗೆ ಬರೆದಿರುವ ಪತ್ರ ಯಾವಾಗ? 20ನೇ ಮೇ 2003 ರ ದಿನಾಂಕದಂದು. ಅದಾದ ಮೇಲೆ ಲೆಟರ್ ಬಂದಿರುವಂಥದ್ದು 19ನೇ ಜೂನ್ 2003 ರಂದು. ಈಗಾಗಲೇ ದುಡ್ಡನ್ನು ತರಿಸಿಕೊಂಡು ಈ ಯೋಜನೆಗಳ ಕೆಲಸ ಪೂರ್ಣವಾಗಬೇಕಾಗಿತ್ತು. ಆದರೆ ಇವರ ಕುಂಭಕರ್ಣ ನಿದ್ರೆಯಿಂದ ಕೆಲಸವಾಗಲಿಲ್ಲ. ಇನ್ನು ಆ ಮುಖ್ಯಮಂತ್ರಿಗಳ ಗ್ರಾಮೀಣ ರಸ್ತೆಗಳ ಬಗ್ಗೆ ಆ ದೇವರೇ ಕಾಪಾಡಬೇಕು. 58 ಕೋಟಿ 28 ಲಕ್ಷ ರೂಪಾಯಿಗಳನ್ನು ನೀವು ನಿಗಧಿ ಮಾಡಿದಿರಿ. ನವೆಂಬರ್ ಕೊನೆಯವರೆಗೆ ಬಿಡುಗಡೆ ಮಾಡಿರುವುದು 29 ಕೋಟಿ 14 ಲಕ್ಷ. ಫೆಬ್ರವರಿ 5 ರವರೆಗೆ ಜಿಲ್ಲಾ ಪಂಚಾಯತ್‌ಗೆ ಬಿಡುಗಡೆ ಮಾಡಿ ಕ್ರಿಯಾಯೋಜನೆಯನ್ನು ತಯಾರು ಮಾಡಿ ಎಂದು ಹೇಳಿದರು.

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ಈಗ ಎಲ್ಲಾ ರಿಲೀಸ್ ಆಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ :- ಇಲ್ಲಾ ಸಾರ್. ನಾನು ನಿಮಗೆ ಕಾಪಿ ಕಳುಹಿಸಿ ಕೊಡುತ್ತೇನೆ. 58 ಕೋಟಿ 28 ಲಕ್ಷ ರೂಪಾಯಿಗಳಲ್ಲಿ ಕೇವಲ 29 ಕೋಟಿ 30 ಲಕ್ಷ ರೂಪಾಯಿಗಳು ಮಾತ್ರ ಈ ಯೋಜನೆಗೆ ವೆಚ್ಚವಾಗಿದೆ. ಅದೂ ಕೆಲಸವಾಗಿಲ್ಲ. ವೆಚ್ಚವಾಗಿದೆ ಎಂದು ಹೇಳುತ್ತಾರೆ. ಅಂದರೆ ಏನು ನಡೆಯುತ್ತಾ ಇದೆ ಇನ್ನೂ. ಅಂದರೆ ಇವೊತ್ತು ಗ್ರಾಮೀಣಾಭಿವೃದ್ಧಿ ಬಗ್ಗೆ ನೀವು ತೆಗೆದುಕೊಂಡಿರುವಂಥ ಕಳಕಳಿ ಮತ್ತು ಆಗಿರುವಂಥ ಕೆಲಸಗಳ ಬಗ್ಗೆ ನಿಮಗೆ ಹೇಳುವಂಥ ಪ್ರಯತ್ನವನ್ನು ನಾನು ಮಾಡುತ್ತಿದ್ದೇನೆ. ಸ್ವಚ್ಚ ಗ್ರಾಮ ಯೋಜನೆ ಬಗ್ಗೆ ಕಾರ್ಯಕ್ರಮ ಹಾಕಲಿಲ್ಲ. ಪ್ರಧಾನಮಂತ್ರಿ ಸಡಕ್ ಯೋಜನೆ ಕುಂಭಕರ್ಣ ನಿದ್ರೆ ಮಾಡುತ್ತಿದೆ ಅದರ ಬಗ್ಗೆ ಏನೂ ಮಾಡುತ್ತಿಲ್ಲ. ಇನ್ನು ವಿದ್ಯುತ್ ಕ್ಷೇತ್ರದ ಬಗ್ಗೆ ಹೇಳುವುದಾದರೆ ನಾವು ಕತ್ತಲಲ್ಲಿ ಕುಳಿತು ಸಾಯುತ್ತಿದ್ದೇವೆ. ಆಶ್ರಯ. ಅಂಬೇಡ್ಕರ್ ಮನೆ ತೆಗೆದುಕೊಂಡರೆ ಒಂದು ಮನೆ ಕೊಡಲಿಲ್ಲ. ಬರಗಾಲದ ಬಗ್ಗೆ ಸಂಪೂರ್ಣ ನಿರ್ಲಕ್ಷ್ಯ. ಉತ್ತರ ಕನ್ನಡದ ಅಭಿವೃದ್ಧಿ ಮಾಡುತ್ತೇವೆ ಎಂದು ಹೇಳಿದಿರಿ. ಈಗ ನಿಮ್ಮದೆ ಸರ್ಕಾರ ಇದೆ. ಅದಕ್ಕೆ 371ನೇ ತಿದ್ದುಪಡಿ ತಂದು ಅಲ್ಲಿ ಉದ್ಯೋಗ ಹಾಗೂ ಶಿಕ್ಷಣ ಕ್ಷೇತ್ರಕ್ಕೆ ಏನೂ ಅನುಕೂಲ ಮಾಡಿಕೊಡಲಿಲ್ಲ. ನಿರುಧ್ಯೋಗಿಗಳಿಗೆ 500 ರೂಪಾಯಿ ಭತ್ಯೆ ಕೊಡುತ್ತೇವೆಂದು ಅವರ ಮೂಗಿಗೆ ತುಪ್ಪ ಹಚ್ಚಿ ಅಧಿಕಾರಕ್ಕೆ ನಮ್ಮ ಕಾಂಗ್ರೆಸ್ಸಿನ ಸ್ನೇಹಿತರು ಬಂದರು. ಆದರೆ ಜೆಡಿಎಸ್‌ನವರು ಸಣ್ಣಪುಟ್ಟ ಕೆಲಸಗಳನ್ನು ಏನೋ ಹಣಕಾಸಿನ ಸಚಿವರು ಇದ್ದಾರೆ ಎಂದು ಮಾಡಿಕೊಂಡು ಹೋಗುತ್ತಿದ್ದೀರಿ. ನಾಳೆ ಚುನಾವಣೆಗೆ ಹೋದರೆ ಕಾಂಗ್ರೆಸ್‌ನವರು ಅಡ್ರೆಸ್ ಇಲ್ಲದ ಹಾಗೆ ಆಗಬಹುದು ಅಥವಾ ಅವರು ಏನು ಹೇಳಬೇಕಾಗುತ್ತದೋ ಗೊತ್ತಿಲ್ಲ. ನಿಮ್ಮಿಬ್ಬರು ಪೈಪೋಟಿಯಲ್ಲಿ ನಿರುದ್ಯೋಗಿ ಯುವಕರಿಗೆ ಅಂತೂ 500 ರೂಪಾಯಿ ಭತ್ಯ ಸಿಗಲಿಲ್ಲ. ಅದನ್ನು ನಾನೇನು ಭರವಸೆ ಕೊಟ್ಟಿರಲಿಲ್ಲ. ನೀವೇ ಕೊಟ್ಟಿದ್ದು, ಕೊನೇಪಕ್ಷ ಸಿ.ಇ.ಟಿ ನಲ್ಲಿ ಮೆರಿಟ್ ಸ್ಟೂಡೆಂಟ್ಸ್ ಬರುತ್ತಾರಲ್ಲ, ಅವರು ಕಟ್ಟಬೇಕಾದಂತಹ ಶುಲ್ಕದ ಹಣ ಭರಿಸುವಂತಹ ಕೆಲಸವಾದರೂ ಆಗಬೇಕಲ್ಲ. ಆ ಕೆಲಸದ ಬಗ್ಗೆ ಈಗಲಾದರೂ ತೀರ್ಮಾನ ತೆಗೆದುಕೊಳ್ಳುತ್ತೀರಿ ಎಂದು ನಾನು ತಿಳಿದು ಕೊಂಡಿದ್ದೇನೆ. ಈ ರೀತಿ ಸಂಪೂರ್ಣವಾಗಿ ನಿರ್ಲಕ್ಷ್ಯವಾಗಿದೆ. ಸ್ವಾಮಿ ಇನ್ನು ಎಸ್‌ಸಿ ಎಸ್‌ಟಿ ಅಯ್ಯೋ. ಅಯ್ಯೋ ನೀವು ಅವರ ಬಗ್ಗೆ ಮಾತನಾಡುತ್ತೀರಿ ಎಂದರೆ. ಆ ಗಂಗಾ ಕಲ್ಯಾಣ ಯೋಜನೆ ಬಗ್ಗೆ ಇಲ್ಲೇ ಸದನದಲ್ಲಿ ಚರ್ಚೆಯಾಯಿತು. ಚರ್ಚೆಯಾದಂತಹ ಸಂದರ್ಭದಲ್ಲಿ ವಿಧಾನಪರಿಷತ್ ಸದಸ್ಯರಾದ ಎ.ಎಸ್.

ಬಸವರಾಜ್ ನಿಯಮ 73ರ ಅಡಿಯಲ್ಲ ಪ್ರಶ್ನೆ ಕೇಳಿದ್ದರು. ಅದಕ್ಕೆ ತಾವು ಉತ್ತರ ಕೊಟ್ಟಿದ್ದೀರಿ. ತಾವು ಕೊಟ್ಟಿರುವಂತಹ ಉತ್ತರದಲ್ಲಿ ವೈಯಕ್ತಿಕ ನೀರಾವರಿ ಕೊಳವೆ ಬಾವಿಯಲ್ಲಿ ಫಲಾನುಭವಿಗಳ ಸಂಖ್ಯೆ 19.200 ಹಾಗೂ ಬಾಕಿ ಇರುವಂತಹ ಫಲಾನುಭವಿಗಳು 5.882. ಇದು ವಿದ್ಯುತ್ ಕನೆಕ್ಷನ್ ಆಗಬೇಕಾಗಿದೆ. ಸಾಮೂಹಿಕ ನೀರಾವರಿ ಕೊಳವೆ ಬಾವಿ ಯೋಜನೆ 531 ಬಾಕಿ ಇದೆ. ಅದಕ್ಕೆ ನೀವೇನು ತೀರ್ಮಾನ ತೆಗೆದುಕೊಂಡಿರಿ. ಮಾನ್ಯ ಉಪಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ದಿ;29–12–2004ರಲ್ಲಿ ನಡೆದ ಸಭೆಯಲ್ಲಿ ಸರ್ಕಾರದ ಅನುದಾನಕ್ಕಾಗಿ ಕಾಯದೆ ಏಪ್ರಿಲ್ 2005 ಮಾಹೆ ಅಂತ್ಯದೊಳಗೆ ವಿದ್ಯುತ್ ಸಂಪರ್ಕಕ್ಕೆ ಬಾಕಿ ಇರುವ ಎಲ್ಲಾ ಕೊಳವೆ ಬಾವಿಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಬೇಕೆಂದು ತೀರ್ಮಾನಿಸಲಾಗಿದೆ. ಎಲ್ಲಾದರೂ ಈ ಗಂಗಾ ಕಲ್ಯಾಣ ಯೋಜನೆಗೆ ವಿದ್ಯುತ್ ಸಂಪರ್ಕ ಕೊಟ್ಟಿದ್ದೇವೆ. ಅದರ ಪ್ರಗತಿಯಾಗಿದೆ ಎಂದರೆ ಅದರ ಬಗ್ಗೆ ತಾವು ಉತ್ತರ ಕೊಡುವಂತಹ ಸಂದರ್ಭದಲ್ಲಿ ಕೊಡಬೇಕು. ನನಗೆ ಸಿಕ್ಕಿರುವಂತಹ ಮಾಹಿತಿ ಪ್ರಕಾರ ಬಹುತೇಕ ಕಡೆ ಈ ಕೆಲಸ ಮಾಡುವ ವಿಚಾರದಲ್ಲಿ ತಾವು ಸಂಪೂರ್ಣ ಹಿಂದೆ ಬಿದ್ದಿದ್ದೀರಿ. ಅದು ಆಗಿಲ್ಲ. ಇನ್ನು ಆರೋಗ್ಯ ಇಲಾಖೆ. ಇಲ್ಲಿ ನಮ್ಮ ಸಚಿವರು ಇದ್ದಾರೋ ಇಲ್ಲವೋ ಗೊತ್ತಿಲ್ಲ. ಉನ್ನತೀಕರಣ ಮಾಡುತ್ತೇವೆ. ಎಕ್ವಿಪ್‌ಮೆಂಟ್ ಕೊಡುತ್ತೇವೆಂದು ಹೇಳಿಕೊಂಡು ಬಂದಿರಿ. ಮಾನ್ಯ ಮಹದೇವಪ್ಪನವರು ವರ್ಲ್ಡ್ ಬ್ಯಾಂಕಿನಿಂದ ದುಡ್ಡು ತೆಗೆದುಕೊಂಡು ಬಂದು ನಮ್ಮಲ್ಲಿ ಬಿಲ್ಡಿಂಗ್ ಕಟ್ಟಿಸಿಕೊಟ್ಟರು. ಶಿಕಾರಿಪುರದಲ್ಲಿ ಒಬ್ಬರು ಡಾಕ್ಟರ್ ಇದ್ದಾರೆ. ಇಡೀ ರಾಜ್ಯದಲ್ಲಿ ಪ್ರತಿಯೊಂದು ಆಸ್ಪತ್ರೆಯಲ್ಲಿ ಅದೇ ಸ್ಥಿತಿ ಇದೆ. ಒಂದು ಪಿ.ಹೆಚ್.ಸಿ ಕೊಡಲಿಲ್ಲ. ಒಂದು ಆಸ್ಪತ್ರೆ 2003–04 ರಲ್ಲಿ....

ಶ್ರೀ ಹೆಚ್.ಸಿ. ಮಹದೇವಪ್ಪ:– ಗೌವರ್ನ್‌ಮೆಂಟ್ ಆಫ್ ಇಂಡಿಯಾ ನಾರ್ಮ್ಸ್ ಇದೆ.

ಶ್ರೀ ಬಿ.ಎಸ್. ಯಡಿಯೂರಪ್ಪ :– ನಾರ್ಮ್ಸ್ ಬಿಟ್ಟು ಹಾಕಿ. ಇರುವ ಆಸ್ಪತ್ರೆಗೆ ಡಾಕ್ಟರ್ ಬೇಡ ಎಂದು ಹೇಳಿದ್ದಾರ. ಡಾಕ್ಟರ್ ಕೊಡಬೇಡಿ ಎಂದು ಹೇಳಿದ್ದಾರ? ಆ ಡಾಕ್ಟರಿಗೆ ಬೇರೆ ರಾಜ್ಯಗಳಲ್ಲಿ 15 ರಿಂದ 20 ಸಾವಿರ ರೂಪಾಯಿ ತಿಂಗಳಿಗೆ ಸಂಬಳ ಕೊಡುತ್ತೀವಿ ಎಂದರೆ ನಿಮಗೇನು ತೊಂದರೆ ಆಗಿದೆ. ಆ ಮೆಡಿಕಲ್ ಗ್ರಾಜುಯೇಟ್ ಸರ್ವೀಸ್ ಮಾಡುವುದಕ್ಕೆ ರೆಡಿ ಇದ್ದಾನೆ. ಅವನು ಬೇರೆ ಬೇರೆ ರಾಜ್ಯಗಳಿಗೆ ಹೋಗಿ ಕೆಲಸ ಮಾಡುತ್ತಿದ್ದಾನೆ. ಹೊರದೇಶಗಳಿಗೆ ಹೋಗುತ್ತಿದ್ದಾನೆ. ಅವರ ಪರವಾಗಿ ನಾವು ಬಡವರು ಕೊಟ್ಟಂತಹ ತೆರಿಗೆ ಹಣದಿಂದ ಗ್ರಾಜ್ಯುಯೇಟ್ ಮಾಡುತ್ತೇವೆ. ಇಷ್ಟು ವರ್ಷವಾಯಿತು. ಎಲ್ಲಾ ಆಸ್ಪತ್ರೆಯಲ್ಲೂ ನೋಡಿದರೆ ಒಂದು

ಆಸ್ಪತ್ರೆಯಲ್ಲಿ ಅಗತ್ಯ ಇರುವಂತಹ ಡಾಕ್ಟರ್ ಸಿಬ್ಬಂದಿ ಇದ್ದಾರೆ. ಡಾಕ್ಟರ್ ಇದ್ದಾರ. ಶಾಲೆ ಇದೆ. ಮೇಷ್ಟ್ರು ಇದಾರ. ಈ ವ್ಯವಸ್ಥೆ ಮಾಡದೆ ಇದ್ದರೆ ಇನ್ನೇನು ನಾವು ಗ್ರಾಮೀಣ ಜನರಿಗೆ ಉದ್ಧಾರ ಮಾಡುವುದು? ಸಾಮಾನ್ಯ ಜನ ಹೈಟೆಕ್ ಆಸ್ಪತ್ರೆಗಳಿಗೆ ಬರುವುದಕ್ಕಾಗುತ್ತದೆಯೇ? ಬೋರಿಂಗ್ ಆಸ್ಪತ್ರೆಗೆ ಹೋಗಿ ನೋಡಿಕೊಂಡು ಬನ್ನಿ. ಅಲ್ಲಿ ವ್ಯವಸ್ಥೆ ಹೇಗಿದೆ ಎಂದು. ಇವತ್ತು ನಾವು, ನೀವು ಸೇರಿಕೊಂಡು ಎಲ್ಲಿಗೆ ಹೋಗುತ್ತೇವೆ.? ಬೋರಿಂಗ್ ಆಸ್ಪತ್ರೆಗೆ ಹೋಗುತ್ತೇವಾ? ಎಂದರೆ ಯಾವ ಪರಿಸ್ಥಿತಿಯಲ್ಲಿ ಈ ಸರ್ಕಾರಿ ಆಸ್ಪತ್ರೆಗಳು ಇವೆ. ಸಿಬ್ಬಂದಿ ಕೊರತೆ ಇದೆ. ನಾವು ಮೆಗ್ಗಾನ್ ಆಸ್ಪತ್ರೆ ಉದ್ಘಾಟನೆ ಮಾಡಿದೆವು. ಆಗ ಆರೋಗ್ಯ ಸಚಿವರು ಬಂದಿದ್ದರು. ಕಳೆದ ಎರಡು ಮೂರು ವರ್ಷದಲ್ಲಿ ಬೇಕಾದಂತಹ ಯಾವುದೇ ಅನುಕೂಲಗಳು ಈ ನಿಮಿಷದವರೆಗೂ ಆಗಿಲ್ಲ ಎಂದರೆ ನಾವೇನು ಮಾಡುತ್ತಿದ್ದೇವೆ? ವ್ಯವಸ್ಥೆಯೆಲ್ಲಾ ಕುಸಿದು ಹೋಗುತ್ತಿದೆಯಲ್ಲ.

ಶ್ರೀ ಎನ್.ಚೆಲುವರಾಯಸ್ವಾಮಿ:- ಮಾನ್ಯ ಅಧ್ಯಕ್ಷರೆ, ತಾವು ಮಾತನಾಡುತ್ತಿರುವುದು ಪಬ್ಲಿಕ್ ಕನ್‌ಸರ್ನ್ಡ್ ವಿಚಾರದಲ್ಲಿ. ಎಜುಕೇಷನ್ ಮತ್ತು ಆರೋಗ್ಯ ಇಲಾಖೆಯಲ್ಲಿ ಹೆಚ್ಚು ಹುದ್ದೆ ಖಾಲಿ ಇರುವುದರಿಂದ ಅದರ ಬಗ್ಗೆ ನಾವು ಹೆಚ್ಚು ಗಮನ ಹರಿಸಬೇಕೆಂದು ತಾವು ಹೇಳುತ್ತಿದ್ದೀರಿ. ಆದರೆ ಅದು ಇವತ್ತು ಪ್ರಾರಂಭವಾಗಿರುವುದು ಅಲ್ಲ. ತಮ್ಮ ಗಮನಕ್ಕೆ ತರಬೇಕೆಂದರೆ ಬಹಳ ವರ್ಷದಿಂದ ನಮಗೆ ಈ ಸಮಸ್ಯೆ ಕಾಡುತ್ತಿದೆ. ರೂರಲ್ ಸೆಕ್ಟರ್‌ನಲ್ಲಿ ಡಾಕ್ಟರ್ ಹೋಗುವುದು ಹಾಗೂ ಅವರ ಕೊರತೆ ಇರತಕ್ಕಂಥದ್ದು. ಹಾಗೂ ಶಿಕ್ಷಕರ ಕೊರತೆ ಬಗ್ಗೆ ಹೇಳುವುದಾದರೆ ಇದಕ್ಕೂ ಅದಕ್ಕೂ ಸಂಬಂಧ ಇಲ್ಲ. ಮುಖ್ಯವಾಗಿ ಡಾಕ್ಟರ್‌ಗಳು ಅವರಿಗೆ ಬೆಂಗಳೂರಿನಲ್ಲಿ ಮೈಸೂರಿನಲ್ಲಿ ಖಾಸಗಿಯಾಗಿ ಅವರಿಗೆ ಪ್ರಾಕ್ಟಿಸ್ ಮಾಡುವುದಕ್ಕೆ ಅವಕಾಶ ಇರುವುದರಿಂದ ಸರ್ಕಾರಿ ನೌಕರಿಗೆ ಅವರು ಬರುವುದು ಬಹಳಷ್ಟು ಸಮಸ್ಯೆ ಇದೆ. ಆ ಸಮಸ್ಯೆಯನ್ನು ನಾವು ಬೇರೆ ಯಾವುದಾದರೂ ರೂಪದಲ್ಲಿ ಬಗೆಹರಿಸಿ, ಅದರ ಬಗ್ಗೆ ಉತ್ತಮ ಮಟ್ಟದ ತೀರ್ಮಾನವನ್ನು ತೆಗೆದುಕೊಳ್ಳಬೇಕು ಎನ್ನುವುದರ ಬಗ್ಗೆ ಈ ಸಮ್ಮಿಶ್ರ ಸರ್ಕಾರ ಕಳೆದ ಮೂರ್ನಾಲ್ಕು ತಿಂಗಳಿಂದ ಸತತವಾದ ಪ್ರಯತ್ನವನ್ನು ಮಾಡಿದ ಮೇಲೆ ಮೊನ್ನೆ ತಾನೆ ತಮಗೆಲ್ಲರಿಗೂ ಗೊತ್ತಿರುವ ಹಾಗೆ ಕಂಟ್ರಾಕ್ಟ್ ಬೇಸಿಸ್‌ನವರಿಗೆ ಸ್ಯಾಲರಿ ಜಾಸ್ತಿ ಮಾಡಿದ್ದೇವೆ. ಜೊತೆಗೆ ನೀವೇನು ಇವತ್ತು ಹೊರರಾಜ್ಯಗಳಲ್ಲಿ ಸಂಬಳ ಕೊಡುತ್ತಿದ್ದಾರೆ ಎಂದು ಹೇಳಿದಿರಿ. ಸ್ಪೆಷಲಿಸ್ಟ್‌ಗೂ ಸಹ ಬೇರೆ ರೀತಿಯಲ್ಲಿ ಅಲೋಯನ್ಸ್ ಮಾಡಿ ನಾವು ಕೊಡಬೇಕು ಎನ್ನುವ ತೀರ್ಮಾನವನ್ನು ತೆಗೆದುಕೊಳ್ಳಬೇಕೆಂದು ಆ ಹಂತದಲ್ಲಿದ್ದೇವೆ. ಮುಂದಿನ

ತಿಂಗಳಲ್ಲಿ 500 ರಿಂದ 800 ಡಾಕ್ಟರ್‌ಗಳ ಕೊರತೆ ಏನಿದೆ. ಅದಕ್ಕೆ ಡಾಕ್ಟರ್‌ಗಳನ್ನು ಸಂಪೂರ್ಣವಾಗಿ ನೇಮಕ ಮಾಡಬೇಕೆಂದು ಎನ್ನುವ ವಿಚಾರದಲ್ಲಿ ಬದ್ಧವಾಗಿದ್ದು, ಮತ್ತು ಸ್ಯಾಲರಿ ಹೆಚ್ಚು ಮಾಡಬೇಕೆಂದು ಇದ್ದೇವೆ. ಇನ್ನು ಗೌರ್ವನ್‌ಮೆಂಟ್ ಕಾಲೇಜ್ ಏನಿದೆ ಯಾರು ಡೊನೇಷನ್ ಇಲ್ಲದೆ ಗೌರ್ವನ್‌ಮೆಂಟ್ ಸೀಟು ತೆಗೆದುಕೊಂಡು ಓದಿರುತ್ತಾರೆ. ಅವರು ಕನಿಷ್ಟವಾಗಿ ಸರ್ವೀಸ್ ಮಾಡಬೇಕು ಹಾಗೂ ಅದನ್ನು ಯಾವ ರೀತಿ ಮಾಡಬೇಕು ಎನ್ನುವುದರ ಬಗ್ಗೆ ಯೋಚನೆ ಮಾಡುತ್ತಿದ್ದೇವೆ. ನಾವು ಖಂಡಿತವಾಗಿ ತಾವೇನು ತಮ್ಮ ಭಾವನೆ ಹಾಗೂ ಅಭಿಪ್ರಾಯವನ್ನು ವ್ಯಕ್ತ ಪಡಿಸುತ್ತಿದ್ದೀರಿ. ಆ ವಿಚಾರದಲ್ಲಿ ಬಹಳಷ್ಟು ಆಲೋಚನೆ ಮಾಡಿ ಕೆಲಸ ಮಾಡುವುದಕ್ಕೆ ತೀರ್ಮಾನ ತೆಗೆದುಕೊಂಡಿದ್ದೇವೆ.

ಶ್ರೀ ಅರಗ ಜ್ಞಾನೇಂದ್ರ :- ಮಾನ್ಯ ಅಧ್ಯಕ್ಷರೆ, ತಾವು ಮೊನ್ನೆ ಸಂಬಳವನ್ನು ಜಾಸ್ತಿ ಮಾಡಿದ್ದೀರಿ. ಆದರೆ ನೀವು ಜಾಸ್ತಿ ಮಾಡಿದ ಸಂಬಳಕ್ಕೆ ಸ್ಪೆಷಲಿಸ್ಟ್‌ಗಳು ಬರುವುದಕ್ಕೆ ಒಪ್ಪುತ್ತಿಲ್ಲ. ಅವರು ಗೈನಕಾಲಜಿಸ್ಟ್ ಇರಬಹುದು. ಸರ್ಜನ್ ಇರಬಹುದು ಇವರುಗಳೆಲ್ಲಾ ಬರುವುದಕ್ಕೆ ಒಪ್ಪುತ್ತಿಲ್ಲ. ಕನಿಷ್ಟ ನೀವು 15 ರಿಂದ 16 ಸಾವಿರ ರೂಪಾಯಿ ಆದರೂ ಸಂಬಳ ಕೊಡಬೇಕಾಗುತ್ತದೆ. ಅವರು ಖಾಸಗಿಯಾಗಿ 15 ರಿಂದ 20 ಸಾವಿರ ರೂಪಾಯಿ ದುಡಿಯುವಾಗ ಅವರು ನಿಮ್ಮ ಹಳ್ಳಿ ಆಸ್ಪತ್ರೆಗಳಿಗೆ ಏಕೆ ಬಂತ್ತಾರೆ ಸರ್? ನಮ್ಮ ತಾಲೂಕು ಹೆಡ್ ಕ್ವಾರ್ಟರ್ಸ್‌ಗಳಲ್ಲಿ ಬರುವುದಿಲ್ಲ. ನಿಮಗೆ ಧನ್ಯವಾದಗಳನ್ನು ಹೇಳಬೇಕಾಗಿದೆ. ವರ್ಲ್ಡ್ ಬ್ಯಾಂಕಿನಲ್ಲಿ ಹಣ ತಂದು ಪ್ರಾರಂಭ ಮಾಡಿರತಕ್ಕಂಥ ಆಸ್ಪತ್ರೆಗಳಿಗೆ ಹೆಚ್ಚು ಹುದ್ದೆಗಳನ್ನು ಮಂಜೂರು ಮಾಡಿಕೊಟ್ಟಿದ್ದೀರಿ. ಏಕೆಂದರೆ ಆ ಹುದ್ದೆ ಮಂಜೂರಾಗದೇ ಇದ್ದಿದ್ದರೆ ಡಾಕ್ಟರ್‌ಗಳೇ ಇರುತ್ತಿಲಿಲ್ಲ ಅದಕ್ಕೆ ಧನ್ಯವಾದಗಳು.

ಶ್ರೀ ಎನ್. ಚೆಲುವರಾಯಸ್ವಾಮಿ:- ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಅರಗ ಜ್ಞಾನೇಂದ್ರರವರು ಹೇಳಿದ ಹಾಗೆ ಸ್ಪೆಷಲಿಸ್ಟ್‌ಗಳಿಗೆ ಸಹ ಬೇರೆ ರೀತಿಯಲ್ಲಿ ಅಲೋಯೆನ್ಸ್ ಕೊಡಬೇಕು ಎನ್ನುವುದರ ಬಗ್ಗೆ ಸಹ ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಹಿರಿಯ ಸಚಿವರುಗಳ ಜೊತೆ ಚರ್ಚೆ ಮಾಡಿ ಅದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತೇವೆ. ಏಕೆಂದರೆ ಏಕಾಏಕಿ ಒಂದೇ ಸಲ ನಾವು ಮಾಡುತ್ತೇವೆಂದು ಹೇಳುವುದಕ್ಕಾಗುವುದಿಲ್ಲ. ಈಗ ಕಳೆದ ಹತ್ತಾರು ವರ್ಷಗಳಿಂದ ಆಸ್ಪತ್ರೆಗಳನ್ನು ಅಪ್‌ಗ್ರೇಡ್ ಮಾಡಿದ್ದಾರೆ. ಎಲ್ಲಾ ಪಿಹೆಚ್‌ಸಿಗಳನ್ನು ಸಿಹೆಚ್‌ಸಿ ಮಾಡಿ ತಾಲ್ಲೂಕುಗಳಲ್ಲಿ 300 ರಿಂದ 500. 500 ಇರುವುದನ್ನು 600 ಕ್ಕೆ ಹೆಚ್ಚಿಸಿದಾಗ ಆ ಸಂದರ್ಭದಲ್ಲಿ ಯಾವುದೂ ಹುದ್ದೆಗಳನ್ನು ಮಂಜೂರು ಮಾಡಿಲ್ಲ. ಸಿಬ್ಬಂದಿಗಳನ್ನು ತೆಗೆದುಕೊಂಡಿಲ್ಲ.

ಬಹುಶಃ ನಾನು ಉಪ ಮುಖ್ಯಮಂತ್ರಿಗಳಿಗೆ ಧನ್ಯವಾದಗಳನ್ನು ಹೇಳಬೇಕು. ಏಕೆಂದರೆ ಸಾರಾಸಗಟಾಗಿ ಇಲ್ಲಿಯವರೆಗೆ ಎಲ್ಲಾ ಕಡೆ ಅಪ್‌ಗ್ರೇಡ್ ಏನಾಗಿದೆ ಪತ್ರದಲ್ಲಿ ಆಗಿರುವಂತಹ ಆಸ್ಪತ್ರೆಗಳಿಗೆ ಫಿಸಿಕಲಿ ಸಹ ಅಪ್‌ಗ್ರೇಡ್ ಫೆಸಿಲಿಟೀಸ್ ಕೊಡುವುದಕ್ಕೆ ತೀರ್ಮಾನ ತೆಗೆದುಕೊಂಡಿದ್ದೇವೆ. ಇದನ್ನು ಹಂತ ಹಂತವಾಗಿ ಖಂಡಿತವಾಗಿಯೂ ಮಾಡುತ್ತೇವೆ ಎನ್ನುವುದನ್ನು ತಮ್ಮ ಗಮನಕ್ಕೆ ತರುತ್ತೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ :– ಮಾನ್ಯ ಅಧ್ಯಕ್ಷರೆ. ಹಿಂದುಳಿದ ವರ್ಗದ ಪ್ರಮುಖರು ಹಾಗೂ ಆಸಕ್ತಿ ಇರುವಂತಹವರು ನಾವೆಲ್ಲಾ ಇಲ್ಲಿ ಕುಳಿತಿದ್ದೇವೆ. ಬಹಳ ಹಿಂದುಳಿದ ವರ್ಗದ ಯುವಕರಿಗೆ ಸ್ವಯಂ ಉದ್ಯೋಗ ಯೋಜನೆಗೆ ಸಹಾಯ ಮಾಡುತ್ತೇವೆಂದು ಹೇಳಿ 2004–05 ರ ಬಜೆಟ್‌ನಲ್ಲಿ ಶ್ರಮಶಕ್ತಿ ಎಂದು ಒಂದು ಯೋಜನೆಯನ್ನು ಪ್ರಾರಂಭ ಮಾಡಿದಿರಿ. ಅದಕ್ಕೆ 20 ಕೋಟಿ ರೂಪಾಯಿ ತೆಗೆದು ಇಟ್ಟಿರಿ. ಆ ಯೋಜನೆ ನೆನಪಿದೆಯಾ? ಅದರ ಬಗ್ಗೆ ಚರ್ಚೆಯಾಯಿತಾ? ಅದಕ್ಕೆ ಒಂದು ರೂಪಾಯಿ ಖರ್ಚು ಮಾಡಿದ್ದೀರಾ? ಇಲ್ಲ. ಅದು ಬಜೆಟ್ ಪುಸ್ತಕದಲ್ಲಿ ಮಾತ್ರ ಇದೆ. ಅದಕ್ಕೆ ನಾನು ಬೆಳಿಗ್ಗೆ ಹೇಳಬೇಕಾದರೆ ಕೆಲವರಿಗೆ ಏನನಿಸಿತೊ ಗೊತ್ತಿಲ್ಲ. ಬೆಳ್ಳಿ ತಟ್ಟೆಯಲ್ಲಿ ಕಪ್ಪೆಯನ್ನು ಇಟ್ಟುಕೊಟ್ಟರೆ ಏನಾಗಬಹುದು? ನಾನು ಹೇಳಿದೆ ಮಾನ್ಯ ಸಿದ್ದರಾಮಯ್ಯನವರಿಗೆ ಬಜೆಟ್ ಆ ರೀತಿಯಾಗಿದೆ. ಹಿಂದುಳಿದ ವರ್ಗದ ಚಾಂಪಿಯನ್ ಎಂದು ಹೇಳಿಕೊಳ್ಳುವಂತಹ ಅನೇಕ ಜನ ಆ ಸ್ಥಾನಮಾನ ಸಿಕ್ಕಮೇಲೆ, ನೀವೆ ಅದರ ಬಗ್ಗೆ ಘೋಷಣೆ ಮಾಡಿದಮೇಲೆ ಆ 20 ಕೋಟಿ ರೂಪಾಯಿಯನ್ನು 2005–06 ರಲ್ಲಿ ಇಲ್ಲಿ ತಂದಿದ್ದೀರಿ. ನೀವೇನು ಮಾಡಿದ ಹಾಗೆ ಆಯಿತು.

ಶ್ರೀ ಎಸ್.ಎಸ್. ಪಾಟೀಲ್ :– ಮಾನ್ಯ ಅಧ್ಯಕ್ಷರೆ, ತಾವು ಬೆಳ್ಳಿ ತಟ್ಟೆಯಲ್ಲಿ ಕಪ್ಪೆ ಇಟ್ಟ ಹಾಗೆ ಎಂದು ಆಗ ಹೇಳಿದಿರಿ. ಏನಾಗುತ್ತದೆ ಎನ್ನುವುದನ್ನು ತಾವು ಹೇಳಿಬಿಟ್ಟರೆ ಒಳ್ಳೆಯದು.

ಶ್ರೀ ಬಿ.ಎಸ್. ಯಡಿಯೂರಪ್ಪ:– ನೀವೇನಾದರೂ ಬಸವಣ್ಣನವರ ವಚನವನ್ನು ಹೇಳಿದರೆ ಅದರಿಂದ ಕೂಡ ಜ್ಞಾನೋದಯವಾಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ ;– ಮಾನ್ಯ ಅಧ್ಯಕ್ಷರೆ. ಕಪ್ಪೆ ಇಟ್ಟು ಬೆಳ್ಳಿ ತಟ್ಟೆ ಕೊಟ್ಟು ಅಭ್ಯಾಸ ಇಲ್ಲ. ಬೆಳ್ಳಿ ತಟ್ಟೆಯಲ್ಲಿ ಕಪ್ಪೆ ಇಟ್ಟರೆ ಕಪ್ಪೆ ಸರಿಯಾಗಿ ಕುಳಿತುಕೊಳ್ಳುವುದಿಲ್ಲ. ಅದರಿಂದ ಬೆಳ್ಳಿ ತಟ್ಟೆಗೂ ಗೌರವ ಬರುವುದಿಲ್ಲ. ಎಲ್ಲೆಂದರಲ್ಲಿ ನೆಗೆಯುತ್ತದೆ ಎಂದು ಅವರು ಹೇಳಿದ್ದು. ತಿನ್ನುವ ಹಾಗೆ ಇಲ್ಲ.

ಶ್ರೀ ಎಸ್.ಎಸ್. ಪಾಟೀಲ್ :- ಬೆಳ್ಳಿ ತಟ್ಟೆಯಲ್ಲಿ ಕಪ್ಪೆ ಇಟ್ಟರೆ ಹೇಗೆ ಉಣ್ಣೋದು ಎಂದು ಕೇಳಿದರೆ ಹೇಗೆ ಎಂದುಕೊಂಡಿದ್ದೆ. ಈಗ ಅದನ್ನು ತಿನ್ನುತ್ತಾರೆ ಎಂದು ಹೇಳಬೇಕೆಂದು ಮಾಡಿದ್ದೆ.

ಶ್ರೀ ಬಿ.ಎಸ್.ಯಡಿಯೂರಪ್ಪ ;- ನಾನು ಮಾನ್ಯ ಸಿಂಧ್ಯಾರವರನ್ನು ವಿನಂತಿ ಮಾಡುವುದು ಇಷ್ಟೆ. ಏನಾದರೂ ಒಂದು ಬಜೆಟ್ ಮಂಡಿಸಿದರೆ ಅದಕ್ಕೆ ಒಂದು ಸ್ಯಾಂಕ್ಟಿಟಿ ಇದೆ. ನಾವು ಹೇಳಿದ ಮೇಲೆ ಆ ಯೋಜನೆ ಆಯಿತೋ ಇಲ್ಲವೋ? ಆಗಿಲ್ಲದಿದ್ದರೆ ಅದು ಏಕೆ ಆಗಿಲ್ಲವೆಂದು ನೋಡಿಕೊಳ್ಳುವಂತಹ ಪ್ರಯತ್ನ ಮಾಡಬೇಕು. ಅದು 1 ಕೋಟಿ 50 ಲಕ್ಷ ರೂಪಾಯಿ ಅಲ್ಲ ಅದಕ್ಕೆ 20 ಕೋಟಿ ರೂಪಾಯಿ ತೆಗೆದಿಟ್ಟಿದ್ದೀರಿ. ಹಿಂದುಳಿದ ವರ್ಗದವರಿಗೆ ಸಂಬಂಧಪಟ್ಟ ಹಾಗೆ ಇದು ಜ್ವಲಂತ ಸಮಸ್ಯೆಯಾಗಿದ್ದು, ಸ್ವಯಂ ಉದ್ಯೋಗದ ಬಗ್ಗೆ ನಾವು ಅನುಕೂಲ ಮಾಡಿಕೊಡುತ್ತೇವೆ ಎಂದು ಆ ಯೋಜನೆಯನ್ನು ಹಾಗೆ ಇಟ್ಟು ಮತ್ತೆ ಮುಂದುವರೆಸುತ್ತೇವೆ ಎಂದರೆ. ಹೇಗೋ ಚುನಾವಣೆ ಬರುತ್ತದೆ. ಹೇಳಿದ್ದೆವು ಎಂದು ಹೇಳುವುದಕ್ಕೆ ಭೂಮಿಕೆ ತಯಾರು ಮಾಡುತ್ತಿದ್ದೀರಿ ಎನ್ನುವ ಅನುಮಾನ ಬರುತ್ತದೆ. ಇನ್ನು ಟೈಲರ್ಸ್ ಅಸೋಸಿಯೇಷನ್ ನವರು ನಿಮ್ಮನ್ನು ಹಾಗೂ ನಮ್ಮನ್ನು ಭೇಟಿ ಮಾಡಿದ್ದರು. ಅಸಂಘಟಿತ ಈ ಕಾರ್ಮಿಕರ ಕ್ಷೇಮಾಭಿವೃದ್ಧಿ ನಿಧಿಯನ್ನು ಪ್ರಾರಂಭ ಮಾಡಿ. ನಾವು ನಮ್ಮ ಕಾಲ ಮೇಲೆ ನಿಲ್ಲುವಂತಹ ವ್ಯವಸ್ಥೆಯನ್ನು ಮಾಡಿಕೊಡಿ. ಇದು ಪಕ್ಕದ ರಾಜ್ಯಗಳಲ್ಲಿ ಜಾರಿಗೆ ಬಂದಿದೆ. ಈ ರೀತಿ ಮಾಡಿದರೆ ಲಕ್ಷಾಂತರ ಜನ ನೆಮ್ಮದಿಯಿಂದ ಬದುಕಿಕೊಳ್ಳುತ್ತೇವೆ ಎಂದೇಳಿದಾಗ. ಅದರ ಬಗ್ಗೆ ದೊಡ್ಡ ಸೆಮಿನಾರ್ ಆಗಿ. ಇಲ್ಲಿ ದೊಡ್ಡ ಕಾರ್ಯಕ್ರಮವಾಗಿ ನಾವು ಮಾನ್ಯ ಮುಖ್ಯಮಂತ್ರಿಗಳನ್ನು ಹಾಗೂ ಸಚಿವರುಗಳನ್ನು ಕಳುಹಿಸಿಕೊಟ್ಟೆವು. ಅಲ್ಲಿ ಭರವಸೆ ಕೊಟ್ಟುಬಂದರು. ಈ ಬಜೆಟ್‌ನಲ್ಲಿ ಅದರ ಬಗ್ಗೆ ಒಂದು ಸೆಂಟೆನ್ಸ್ ಆದರೂ ಬರುತ್ತದೆಂದು ತಿಳಿದುಕೊಂಡಿದ್ದೆವು. ನೀವೇನು ಮಾಡಬೇಕಾಗಿಲ್ಲ. ಅದರ ನಿಧಿ ಸಂಗ್ರಹ ಮಾಡಿ. ಕ್ಷೇಮಾಭಿವೃದ್ಧಿ ನಿಧಿ ಮಾಡಿಕೊಂಡಾಗ ಅದಕ್ಕೆ ನೀವು ಸ್ವಲ್ಪ ಸಹಾಯ ಮಾಡಿದರೆ ಅವರು ಸ್ವತಂತ್ರವಾಗಿ ಬದುಕುತ್ತಾರೆ. ಅದರ ಬಗ್ಗೆ ತಾವು ಸ್ವಲ್ಪ ಯೋಜನೆಯನ್ನು ಮಾಡಬೇಕು. ನಾವು ಬಹಳ ಮಾತನಾಡಿದೆವು ಸ್ತ್ರೀಶಕ್ತಿ ಸ್ವಸಹಾಯ ಗುಂಪುಗಳ ಬಗ್ಗೆ ಗ್ರಾಮೀಣ ಪ್ರದೇಶಕ್ಕೆ ಹೋದರೆ ಇನ್ನು ಹತ್ತು ವರ್ಷಗಳ ಹಿಂದೆ ಈ ಯೋಜನೆ ಪ್ರಾರಂಭ ಮಾಡಿದ್ದರೆ ಮಹಿಳೆಯರಲ್ಲಿ ಎಷ್ಟು ಜಾಗೃತಿ ಬರುತ್ತಿತ್ತು ಎಂದು ಸಂತೋಷವಾಗುತ್ತದೆ. ಆನಂದವಾಗುತ್ತದೆ. ಇಷ್ಟೊಂದು ಜಾಗೃತಿ ಇಷ್ಟೊಂದು ಜಾಗ್ರತೆ ಬಂದಿದೆ. ತಾವು ಗ್ರಾಮೀಣ ಮಹಿಳೆಯರ ಕ್ರಿಯಾಶೀಲ ಚಟುವಟಿಕೆಗಳನ್ನು

ನಡೆಸುವುದಕ್ಕೆ 2004–05ರಲ್ಲಿ 16 ಕೋಟಿ ಇಟ್ಟಿದ್ದೀರಿ 2005–06ಕ್ಕೆ 11 ಕೋಟಿಗೆ ಇಳಿಸಿದಿರಿ. ಇದು ಉದ್ಧಾರ ಮಾಡುವುದೇ? ಬಜೆಟ್‌ನ ಪ್ಯಾರಾ 95ರಲ್ಲಿನ ಸ್ತ್ರೀ ಶಕ್ತಿ ಆವರ್ತ ನಿಧಿಗೆ ಗ್ರಾಮೀಣ ಮಹಿಳೆಯರಿಗೆ ಕ್ರಿಯಾಶೀಲ ಚಟುವಟಿಕೆಗಳನ್ನು ನಡೆಸಲು 2004–05ರಲ್ಲಿ 16 ಕೋಟಿ ತೆಗೆದು ಇಟ್ಟಿದ್ದೆವು. ಈ ಬಾರಿ 16 ಕೋಟಿ ಇದ್ದದ್ದು 2005–06ಕ್ಕೆ ಪ್ರಗತಿ ಹೇಗೆ ಆಗಿದೆ ಎಂದರೆ 11 ಕೋಟಿಗೆ ಇಳಿಸಿದಿರಿ. ಒಂದು ಲಕ್ಷ ಸ್ವಸಹಾಯ ಗುಂಪುಗಳು ನಿಮ್ಮ ಗುರಿ ಇತ್ತು. ಈಗ ರಾಜ್ಯದಲ್ಲಿ ಒಂದುಲಕ್ಷದ ಇಪ್ಪತ್ತು ಸಾವಿರ ಸ್ವಸಹಾಯ ಗುಂಪುಗಳು ಇದ್ದಾವೆ. ಆದರೆ ಅವರಿಗೆ ಬೇಕಾದಂಥ ಅನುಕೂಲ ಮಾಡಿಕೊಡುವುದಕ್ಕೋಸ್ಕರ ಹಣ ಇಲ್ಲ ನಮ್ಮದು ಒಂದೇ ಲಕ್ಷಕ್ಕೆ ಕ್ಲೋಸ್ ಎಂದು ಹೇಳುತ್ತೀರಿ. ಇವತ್ತು ಒಂದು ಲಕ್ಷ ಇಪ್ಪತ್ತು ಸಾವಿರ ಇದ್ದದ್ದು ಒಂದು ಲಕ್ಷದ ನಲವತ್ತು ಸಾವಿರವಾಗುತ್ತದೆ. ಅದು ಜಾಗೃತಿಯಾಗುತ್ತಿದೆ. ಇವತ್ತು ಇಷ್ಟು ದೊಡ್ಡ ಪ್ರಮಾಣದಲ್ಲಿ ಹಣವನ್ನು ಸಂಗ್ರಹ ಮಾಡಿ ಇಟ್ಟಿದ್ದಾರೆ. ರೀಪೇಮೆಂಟ್ 95–96 ಪರ್‌ಸೆಂಟ್ ಎಂದು ಮೊನ್ನೆ ಶಿಕಾರಿ ಪುರದಲ್ಲಿ ಡಿ.ಸಿ.ಸಿ. ಬ್ಯಾಂಕ್ ಅಧಿಕಾರಿಗಳು ಬಂದಾಗ ಹೇಳುತ್ತಿದ್ದರು. ಇಷ್ಟು ಒಳ್ಳೆಯ ರೀತಿಯಲ್ಲಿ ಉಳಿತಾಯ ಮಾಡಿ ಅವರ ಕಾಲಮೇಲೆ ನಿಲ್ಲತಕ್ಕ ಪ್ರಯತ್ನ ಮಾಡುತ್ತಿದ್ದಾಗ ಅವರಿಗೆ ನಿಮ್ಮ ವಿಶೇಷವಾದ ಬ್ಯಾಂಕನ್ನು ತೆರೆಯುತ್ತೇವೆಂದು ಘೋಷಣೆ ಇದೆ. ಮೊದಲು ಜಿಲ್ಲಾ ಮಟ್ಟದಲ್ಲಿ ಪ್ರಾರಂಭ ಮಾಡಿ. ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದವರೇನೋ ಪರ್ಮಿಷನ್ ಕೊಟ್ಟಿಲ್ಲವೆಂದರೆ ಅವರನ್ನು ಕನ್‌ವಿನ್ಸ್ ಮಾಡಿ. ನಾವು ಯಾವ್ಯಾವುದಕ್ಕೋ ಬೇರೆ ಬೇರೆ ಕೆಲಸಕ್ಕೆ ದೆಹಲಿಗೆ ಹೋಗುತ್ತೇವೆ. ಇಷ್ಟು ಇಡೀ ದೇಶಕ್ಕೆ ಮಾದರಿಯಾಗುವ ಯೋಜನೆ ನಮ್ಮಲ್ಲಿ ಜಾರಿಯಾಗುತ್ತಿರುವಾಗ ಅದು ಇಡೀ ದೇಶಕ್ಕೆ ವಿಸ್ತರಣೆಯಾಗಬೇಕು ಎಂಬ ರೀತಿಯಲ್ಲಿ ಅದಕ್ಕೆ ವಿಶೇಷ ಬ್ಯಾಂಕುಗಳನ್ನು ತೆರೆದು ಮಾಡುವಂಥ ಕೆಲಸಕ್ಕೆ ನೀವೇಕೆ ಹಿಂದೆ ಮುಂದೆ ನೋಡುತ್ತಿದ್ದೀರ ಎಂದು ನನಗೆ ಅರ್ಥವಾಗುತ್ತಿಲ್ಲ. ಸಂಚಾರಿ ಪೀಠದ ಬಗ್ಗೆ ಹೇಳುವುದಾದರೆ ಒಂದು ವಾರದಿಂದ ಉಪವಾಸ ಸತ್ಯಾಗ್ರಹ ನಡೆಯುತ್ತಿದೆ. ಮಾನ್ಯ ಮುಖ್ಯಮಂತ್ರಿಯವರನ್ನು ಹೋಗಿ ಕಂಡರು. ಆದರೂ ಅವರು ಒಪ್ಪಿಕೊಳ್ಳಲಿಲ್ಲ. 2004–05ರ ಹಣವನ್ನು 2005–06ಕ್ಕೆ ವಿಸ್ತರಣೆ ಮಾಡಿದ್ದಾರೆ. ಹಿಂದಿನ ಮುಖ್ಯ ನ್ಯಾಯಧೀಶರು ಇದಕ್ಕೆ ಐವತ್ತು ಕೋಟಿ ತೆಗೆದಿಡಿ ಎಂದು ಹೇಳಿದ್ದರು. ಆದರೆ ತಾವು 20 ಕೋಟಿಯಲ್ಲೇ ತೃಪ್ತಿಪಟ್ಟುಕೊಳ್ಳುತ್ತಿದ್ದೀರ. ಸಂಚಾರಿ ನ್ಯಾಯಾಲಯ ಪ್ರಾರಂಭವಾಗಲಿಲ್ಲ. ಭರವಸೆ. ಭರವಸೆ. ಭರವಸೆ ಕಳೆದ ಆರೇಳು ವರ್ಷಗಳಿಂದ ಈ ಭರವಸೆ ಬಿಟ್ಟು ಇನ್ನೇನೂ ಆಗಿಲ್ಲವೆಂದು ನನಗೆ ಬಹಳ ನೋವು ತರುವಂಥ ಸಂಗತಿ. ನಮ್ಮ ರಾಜ್ಯದಲ್ಲಿ ರೈತರ ಸ್ಥಿತಿ. ಅವರ

ಸರ್ವೆ ಡಿಪಾರ್ಟ್‌ಮೆಂಟ್‌ನಿಂದ ಏನಾದರು ಅಳತೆ ಮತ್ತೊಂದು ಮಾಡಿಕೊಳ್ಳಬೇಕೆಂದರೆ ಸಿಬ್ಬಂದಿ ಇಲ್ಲ. ಡಿಪಾರ್ಟ್‌ಮೆಂಟ್‌ನ್ನು ಸ್ಟ್ರೆಂತನ್ ಮಾಡುವ ಪ್ರಯತ್ನವಿಲ್ಲ. ಇಪ್ಪತ್ತೈದು. ಮೂವತ್ತು ಐವತ್ತು ವರ್ಷಗಳ ದಾಖಲೆಗಳೆಲ್ಲಾ ಧೂಳು ತಿಂದು ಹರಿದು ಹೋಗುತ್ತಿದೆ, ನಕಾಶೆಗಳು ಐದಾರು ಪೀಸುಗಳಾಗುತ್ತವೆ. ಇನ್ನೊಂದು ಐದಾರು ವರ್ಷಗಳಾದರೆ ಆ ವಿಲೇಜ್‌ಗಳ ಮ್ಯಾಪುಗಳೇ ತಮಗೆ ಸಿಗುವುದಿಲ್ಲ. ಕತ್ತಿ ಹಿಡಿದುಕೊಂಡು ಮಸೆಯುವಂಥ, ಬಡಿದಾಡುವಂಥ ಕಾಲ ಬರುತ್ತದೆ. ಅದನ್ನು ಕಾಪಿ ಮಾಡಲು ಸರ್ವೆಯವರಿಗೆ ಅವಕಾಶ ಮಾಡುತ್ತೇವೆಂದು ಇದಕ್ಕೆ 330 ರೂಪಾಯಿಗಳನ್ನು ನಾವೇ ಕೊಡುತ್ತೇವೆಂದು ಹೇಳಿದ್ದೀರಿ. ಅದು ಯಾವುದೂ ಇದುವರೆಗೆ ಕಾರ್ಯರೂಪಕ್ಕೆ ಬರಲಿಲ್ಲ. ಅದರ ಬಗ್ಗೆ ಇಲ್ಲೇ ಸದನದಲ್ಲೇ ಕೊಟ್ಟಂತ ಭರವಸೆ. ರೈತರ ಬಗ್ಗೆ ನಾವು ಬಡಿದಾಡುತ್ತೇವೆ. 1978ರ ಪೂರ್ವದಲ್ಲಿ ಫಾರೆಸ್ಟ್ ಇಲಾಖೆಯಿಂದ ಕೇಂದ್ರದಿಂದ ಅಕ್ರಮ ಸಕ್ರಮಕ್ಕೆ ಅನುಮತಿ ಬಂದಿದ್ದರೂ ಸೆಂಟ್ರಲ್ ಗೌರ್ನಮೆಂಟ್‌ನಿಂದ ಜಮೀನು ರಿಲೀಸ್ ಆಗಿದ್ದರೂ ಅದರ ಪ್ರೊಸೆಸನ್ನು ಪೂರ್ತಿ ಮಾಡಲಿಲ್ಲ. ಅವನಿಗೆ ಹಕ್ಕುಪತ್ರವನ್ನು ಕೊಡಲಿಲ್ಲ ದಾಖಲೆಗಳಲ್ಲಿ ಮಾರ್ಪಾಡು ಆಗಲಿಲ್ಲ. ಅಲ್ಪ ಸಂಖ್ಯಾತರ ಸ್ವಾವಲಂಬನಾ ಯೋಜನೆಯನ್ನು ಬಜೆಟ್‌ನಲ್ಲಿ ತಂದಿರಿ. ಆದರೆ ಒಂದು ಪೈಸೆ ಬಿಡುಗಡೆ ಮಾಡಲಿಲ್ಲ. ನಮ್ಮ ರೈತರಿಗೆ ಕೊಡುವಂಥ ಪಹಣಿ. ಭಾಷಣ ಮಾಡಿದ್ದೇ ಮಾಡಿದ್ದು ಒಂದು ದಾಖಲೆಯನ್ನು ತೆಗೆದುಕೊಳ್ಳಬೇಕಾಗಿದ್ದರೆ ನೀವು 15 ರೂಪಾಯಿಗಳನ್ನು ಚಾರ್ಜ್ ಮಾಡುತ್ತೀರಿ. ಹೋಬಳಿಗೆ ಒಂದು ಕಂಪ್ಯೂಟರ್ ವ್ಯವಸ್ಥೆ ಮಾಡಿ ದಾಖಲೆ ಸಿಗುವಂತೆ ಮಾಡುತ್ತೇವೆ. ಐದು ರೂಪಾಯಿಗೆ ಒಂದು ಸರ್ವೆನಂಬರ್‌ನ ದಾಖಲೆಯನ್ನು ಕೊಡುತ್ತೇವೆಂದು ಭರವಸೆಯನ್ನು ಕೊಟ್ಟಿರಿ. ಆದರೆ ಆ ಭರವಸೆ ಭರವಸೆಯಾಗಿಯೇ ಉಳಿದಿದೆ. ಸುಮಾರು 35–40 ಕೋಟಿ ರೂಪಾಯಿ ಅದರಿಂದ ಬಂದಿದೆ. ಪಾಪ ಆ ಬಡಪಾಯಿಗೆ ತಕ್ಷಣದಲ್ಲಿ ಕಂಪ್ಯೂಟರ್‌ನಲ್ಲಿ ದಾಖಲೆ ಸಿಗುವುದಿಲ್ಲ. ಹದಿನೈದು ರೂಪಾಯಿ ಕೊಡಬೇಕು. ಬೆಳಿಗ್ಗೆಯಿಂದ ಸಂಜೆಯವರೆಗೆ ಕಾಯಬೇಕು. ಹೋಬಳಿ ಮಟ್ಟದಲ್ಲಿ ಇದನ್ನು ತೆಗೆಯುತ್ತೇವೆ ಎಂಬುದು ಕನಸಾಗಿಯೇ ಇದೆ. ಅದನ್ನು ಮಾಡಲಿಲ್ಲ. ನೇಕಾರರಿಗೆ. ಸಚಿವರಾದ ತಕ್ಷಣ ಸುರೇಶ ಜಾರಕಿಹೊಳೆಯವರು ಹೇಳಿದ್ದೇ ಹೇಳಿದ್ದು ಇಪ್ಪತ್ತೈದು ದಿವಸಗಳಿಂದ ರಾಜ್ಯಾದ್ಯಂತ ಪ್ರವಾಸ ಮಾಡುತ್ತಿದ್ದೇನೆ. ಏನು ಬೇಕಾದರು ಮಾಡಿಕೊಡುತ್ತೇನೆಂದು ಹೇಳಿದರು. ತಾವು ಘೋಷಣೆ ಮಾಡಿದಂಥದಕ್ಕೆ ಒಂದು ಪೈಸೆ ಹಣ ಬಿಡುಗಡೆಯಾಗಲಿಲ್ಲ. ನೇಕಾರರ ಪ್ಯಾಕೇಜ್ ಕಾರ್ಯರೂಪಕ್ಕೆ ಬರಲಿಲ್ಲ. ಅವರ ಮೂಗಿಗೆ ತುಪ್ಪವನ್ನು ಹಚ್ಚಿದಿರಿ. ಅಲ್ಲಿಗೆ ಮುಗಿಯಿತು. ಮಲೆನಾಡು ಅಭಿವೃದ್ಧಿ ಮಂಡಳಿ ಹೈದ್ರಾಬಾದ್ ಅಭಿವೃದ್ಧಿ ಮಂಡಳಿ. ಬರಬೇಕಾಗಿರುವುದು ಎಷ್ಟು? ನಮ್ಮ ಶಿವಮೊಗ್ಗ ಮಲೆನಾಡು ಅಭಿವೃದ್ಧಿ ಮಂಡಳಿಗೆ 77 ಶಾಸಕರು ಪ್ರತಿನಿಧಿಸುವಂಥದ್ದು

ಆ ಮಂಡಳಿ. 20 ಕೋಟಿ ಹಣವನ್ನು ತೆಗೆದಿಟ್ಟಿದ್ದೀರ. ಬಾಕಿ 23 ಕೋಟಿ ಕೊಡಬೇಕು, ಹಳೆಯ ಬಾಕಿ 23 ಕೋಟಿ ಕೊಡಬೇಕು, ಆದರೆ ತೆಗೆದಿಟ್ಟಿರುವ ಹಣ 20 ಕೋಟಿ. ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿಯ ಕತೆಯನ್ನು ಹೇಳಿದ್ದೇನೆ. ಎಸ್.ಸಿ. ಎಸ್.ಟಿ. ಬಿ.ಸಿ.ಎಂ. ಹಾಸ್ಟೆಲ್‌ಗಳು. ಹತ್ತು ವರ್ಷವಾಯಿತು ಇದನ್ನು ಸ್ಟ್ರೆಂಥನ್‌ಮಾಡುವಂಥದ್ದು. ಮಕ್ಕಳ ಸಂಖ್ಯೆ ಜಾಸ್ತಿಯಾಗಿ ಹಾಸ್ಟೆಲ್‌ಗಳ ಸಂಖ್ಯೆ ಜಾಸ್ತಿ ಮಾಡುವಂಥ ಕೆಲಸವನ್ನು ಮಾಡಲೇ ಇಲ್ಲ. ಜನಸಂಖ್ಯೆ ಜಾಸ್ತಿಯಾಯಿತು. ಶಾಲೆಗೆ ಮಕ್ಕಳು ಬೇಕು ಎಂದು ಹೇಳುತ್ತಾರೆ. ನಮ್ಮೆಲ್ಲ ಶಾಸಕರಿಗೆ ವಿಲೇಜ್‌ನಿಂದ ಬಂದಂಥವರು ಒಂದು ಹಾಸ್ಟೆಲ್‌ನಲ್ಲಿ ಇಟ್ಟುಕೊಳ್ಳಿ ಎಂದು ನಮ್ಮ ಕೈಕಾಲನ್ನು ಕಟ್ಟುತ್ತಾರೆ. ಅದು ತಾಲ್ಲೂಕು ಮಟ್ಟದಲ್ಲಿ ಅಥವಾ ಬೇರೆ ಮಟ್ಟದಲ್ಲಿನ ಹಾಸ್ಟೆಲ್‌ಗಳು ಇರಬಹುದು. ಅದಕ್ಕೆ ಏನಾದರು ಹೆಚ್ಚು ಹಾಸ್ಟೆಲ್‌ಗಳನ್ನು ತೆರೆಯುವಂಥದ್ದು ಇರುವ ಹಾಸ್ಟೆಲ್‌ಗಳನ್ನು ಸ್ಟ್ರೆಂಥನ್ ಮಾಡುವಂಥದ್ದು ಸಂಖ್ಯೆಗಳನ್ನು ಜಾಸ್ತಿ ಮಾಡುವಂಥದ್ದು ಮಾಡಲಿಲ್ಲ. ವಿದ್ಯಾರ್ಥಿಗಳ ನಿರ್ವಾಹಣಾ ವೆಚ್ಚ ಹಣವನ್ನು ಸರಿಯಾಗಿ ಬಿಡುಗಡೆ ಮಾಡುತ್ತಿಲ್ಲ. ಶಿವಮೊಗ್ಗ ಜಿಲ್ಲೆ ಒಂದರಲ್ಲೇ 2003–04ಕ್ಕೆ 107 ಲಕ್ಷ ಬಾಕಿ ಇದೆ. ಇದು ಇಡೀ ರಾಜ್ಯಕ್ಕೆ ಸಂಬಂಧಪಡುತ್ತದೆ. ನಾನು ನಮ್ಮ ಒಂದು ಜಿಲ್ಲೆಯ ಬಗ್ಗೆ ಕುಳಿತು ಸ್ಟಡೀ ಮಾಡಿದ್ದೇನೆ. ಮಕ್ಕಳ ಶುಲ್ಕ ವಿನಾಯಿತಿ. 2001–02ರಿಂದ ಇವತ್ತಿನವರೆಗೆ ಶಿವಮೊಗ್ಗ ಜಿಲ್ಲೆಗೆ 53 ಲಕ್ಷ ಬಾಕಿ ಇದೆ. ಇದರಿಂದ ಇಡೀ ರಾಜ್ಯದ ಚಿತ್ರ ನಿಮಗೆ ಸಿಗಬಹುದೆಂದು ನಾನು ಅಂದುಕೊಂಡಿದ್ದೇನೆ. ತಮ್ಮ ಸರ್ಕಾರಕ್ಕೆ ಬಳಿಗಾರ್‌ರವರ ಮೇಲೆ ಪ್ರಭುದೇವ್‌ರವರ ಮೇಲೆ ಏಕೆ ಕಣ್ಣು ಬಿತ್ತೋ ನನಗೆ ಗೊತ್ತಿಲ್ಲ. ಕಾರಣವೇನೆಂದು ನನಗೇನು ಗೊತ್ತು? ಬಳಿಗಾರ್ ಒಬ್ಬ ಪ್ರಾಮಾಣಿಕ ಅಧಿಕಾರಿ. ಕೆಲವು ಕಾರಣಕ್ಕೆ ಅವರು ಬಹಳ ಬಿಗಿ ಎಂಬುದಕ್ಕೆ ನಮಗೆ ಸಿಟ್ಟು ಇದೆ. ಆದರೆ ಅವರು ಪ್ರಾಮಾಣಿಕರು ಎಂಬುದನ್ನು ಒಪ್ಪಿಕೊಳ್ಳಬೇಕಲ್ಲಾ ಪ್ರಭುದೇವ್ ಅವರ ಬಗ್ಗೆ ಯಾರಾದರು ಒಬ್ಬರು ಬೆಟ್ಟು ತೋರಿಸಿ ಮಾತನಾಡಲಿಲ್ಲ. ಅವರೀಗ ನಾಲ್ಕಾರು ವರ್ಷಗಳಿಂದ ಇಲ್ಲದ ರೀತಿಯ ಕಿರುಕುಳ ಕೊಡುವಂಥ ಪ್ರಯತ್ನ ಮಾಡಿ ಮಾನಸಿಕವಾಗಿ ಹಿಂಸೆ ಮಾಡಿ ಒಂದು ರೀತಿ ಅಪಮಾನ ಮಾಡುವಂಥ ಸೇಡು ತೀರಿಸಿಕೊಳ್ಳುವಂಥ ಪ್ರಯತ್ನ ಮಾಡಿದ್ದಾರೆ. ನಾವು ಐದಾರು ಜನ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ನಿಮ್ಮ ಮನಸ್ಸಿನಲ್ಲೇನಿದೆ ಎಂದು ಪ್ರಾಮಾಣಿಕರು ಇಲ್ಲಿ ಇರಬಾರದು ಎಂದು ನಿಮ್ಮ ಅಪೇಕ್ಷೆ ಇದೆಯೆ? ಎಂಬುದನ್ನು ಕೇಳಬೇಕು. ಒಂದು ಕಣ್ಣಿಗೆ ಬೆಣ್ಣೆ ಒಂದು ಕಣ್ಣಿಗೆ ಸುಣ್ಣ ಏಕೆ ಎಂದು ನಮಗೆ ಅರ್ಥವಾಗುತ್ತಿಲ್ಲ. ನಮ್ಮ ಸರ್ಕಾರಿ ಮುದ್ರಣಾಲಯದಲ್ಲಿ ಗಂಗಯ್ಯ ಎಂದು ಒಬ್ಬರು ಎಂ.ಡಿ. ರವರು ಇದ್ದಾರೆ. ಲೋಕಾಯುಕ್ತ ಕೆಲವು ಅಧಿಕಾರಿಗಳನ್ನು ಅವರ ಮೇಲೆ

ಪ್ರಾಸಿಕ್ಯೂಷನ್ ಪ್ರೊಸೀಡಿಂಗ್ಸ್‌ಗೆ ಪರ್ಮಿಷನ್ ಕೇಳಿದ್ದರು. ನಾನು ಎಲ್ಲಾ ಅಧಿಕಾರಿಗಳ ಹೆಸರನ್ನು ಹೇಳಿ ಅವಮಾನ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ಆದರೆ ಅದರಲ್ಲಿ ಮೊದಲನೆಯ ಹೆಸರು. ಹೆಚ್. ಗಂಗಯ್ಯ ಡೈರೆಕ್ಟರ್. ಪ್ರಿಂಟಿಂಗ್ ಅಂಡ್ ಸ್ಟೇಷನರಿ. ಗೌರ್ನಮೆಂಟ್ ಪ್ರೆಸ್. ಈ ಮಹಾತ್ಮ ಅಲ್ಲಿ ಹತ್ತು ವರ್ಷಗಳಿಂದ ಇದ್ದಾನೆ. ಟೆಕ್ಸ್ಟ್ ಪುಸ್ತಕಗಳು ಪ್ರಿಂಟೇ ಆಗುತ್ತಿಲ್ಲ. ಅದಕ್ಕೆ ಅವಕಾಶವೇ ಇಲ್ಲ. ನಾನೇ ಎಲ್ಲಾ ಟೆಕ್ಸ್ಟ್ ಪುಸ್ತಕ ಪ್ರಿಂಟ್ ಮಾಡಿ ಹಂಚುತ್ತೇನೆಂದು ಕೋಟ್ಯಾಂತರ ರೂಪಾಯಿ ಬೆಲೆ ಬಾಳುವ ಮಿಷನರಿ ಖರೀದಿ ಮಾಡಿದ್ದಾರೆ. ಆದರೆ ಅನಗತ್ಯವಾಗಿ ಅದು ಮೂಲೆಗೆ ಬಿದ್ದಿದೆ. ನಾವು ನಾಲ್ಕಾರು ಜನರು ಅದನ್ನು ಹೋಗಿ ನೋಡಿಬರೋಣ. ಅದು ಯಾವ ರಕ್ಷಣೆಯೆ? ಯಾವ ವಿಧವೋ ? ಈ ಕಡೆ ಪ್ರಾಮಾಣಿಕವಾಗಿರುವ ಅಧಿಕಾರಿಗಳನ್ನು ಮುಗಿಸುವ ಪ್ರಯತ್ನ ಮಾಡುವುದು. ಇನ್ನೊಂದು ಕಡೆ ಅಲ್ಲಿ ಲೂಟಿ ನಡೆದಿದೆ. ಹಗಲು ದರೋಡೆ ನಡೆದಿದೆ ಎಂದು ಲೋಕಾಯುಕ್ತರು ಹೇಳುತ್ತಾರೆ. ಹೈಕೋರ್ಟ್ ಇವರ ಬಗ್ಗೆ ಹೇಳಿದೆ. ಅವರಿಗೆ ರಕ್ಷಣೆ ಕೊಡುವಂಥದ್ದು ಏಕೆ? ಏನು? ನನಗೆ ಗೊತ್ತಿಲ್ಲ. ಭೂಸೇನಾ ನಿಗಮದ ಕಛೇರಿಯ ಮೇಲೆ ಲೋಕಾಯುಕ್ತರು ದಾಳಿ ಮಾಡಿದರು. ದಾಖಲೆಗಳೇ ಇಲ್ಲ ಎಂದು ಹೇಳಿದರು. ಹಾಗಾದರೆ ಅಲ್ಲಿ ಹೇಗೆ ಕೆಲಸ ನಡೆಯುತ್ತಿದೆ? ಹೇಗೆ ಕಛೇರಿಯವರು ಮಾಡುತ್ತಿದ್ದಾರೆ? ನಮ್ಮ ಗಂಗಯ್ಯನವರು ಕಾಂಟ್ರಾಕ್ಟ್ ಬೇಸಿಸ್ ಮೇಲೆ ಕೇರಳಾದವರನ್ನು ಕರೆದುಕೊಂಡು ಬಂದು ಕೆಲಸ ಕೊಟ್ಟಿದ್ದಾರೆ. ಕರ್ನಾಟಕದವರು ಇರಲಿಲ್ಲವೆಂದು ಹೇಳಿ ಅವರನ್ನು ಕರೆದುಕೊಂಡು ಬಂದು ಕೆಲಸ ಕೊಟ್ಟಿದ್ದಾರೆ. ಇಲ್ಲಿ ಹೇಳುವವರು ಕೇಳುವವರು ಇದ್ದಾರೋ. ಇಲ್ಲವೋ. ಏಕೇ ಈ ರೀತಿ ನಡೆಸುತ್ತಿದ್ದಾರೋ ನಮಗಂತು ಸ್ವಲ್ಪವೂ ಅರ್ಥವಾಗುತ್ತಿಲ್ಲ. ಇನ್ನು ಐದು ಹತ್ತು ನಿಮಿಷದಲ್ಲಿ ನಾನು ಮುಗಿಸುತ್ತೇನೆ. ಬೇರೆಯವರು ಮಾತನಾಡಲಿ. 2004-05ನೇ ಸಾಲಿನಲ್ಲಿ ವಸತಿ ರಹಿತ ಹಾಗೂ ನಿವೇಶನ ಮತ್ತು ವಸತಿ ವಂಚಿತ ಕಾಣಿಕೆಯನ್ನು ಈ ಸರ್ಕಾರ ನಮಗೆ ಕೊಟ್ಟಿದೆ. 2004-05ರ ಆಯವ್ಯಯದಲ್ಲಿ 1137 ಕೋಟಿ 80 ಲಕ್ಷ ರೂಪಾಯಿಗಳನ್ನು ವಸತಿ ಹಾಗೂ ನಗರಾಭಿವೃದ್ಧಿ ಇಲಾಖೆಗೆ ನಿಗದಿ ಮಾಡಿದ್ದರು. ಅದರಲ್ಲಿ ಹಳೆಯ ಬಾಕಿ. ಹೊಸದು ಒಂದು ಮನೆಯೂ ಇಲ್ಲ. ಹಳೆಯ ಬಾಕಿಗೆ 863 ಕೋಟಿ 78 ಲಕ್ಷ ಖರ್ಚು ಮಾಡಿದ್ದೀರ. ಅಂದರೆ ರೂ 274 ಕೋಟಿ 2 ಲಕ್ಷ ಈ ವರ್ಷ ಬಜೆಟ್‌ನಲ್ಲಿ ಅಲೋಕೇಷನ್ ಮಾಡಿದ್ದು ಅದು ಹಾಗೆಯೇ ಬಿದ್ದಿದೆ. ಆದರೆ ನಿಮ್ಮದು surplus budget ಎಂದು ಹೇಳುತ್ತೀರಿ. ಅದರಲ್ಲಿ ಯಾವುದಕ್ಕೂ ಏನೂ ಖರ್ಚು ಮಾಡದೆ ಅಂಕಿಅಂಶದೊಂದಿಗೆ ಮಂಜೂರು ಆದದ್ದು ಎಷ್ಟು? ಖರ್ಚಾದದ್ದು ಎಷ್ಟು? ಬಿಡುಗಡೆ ಆದದ್ದು ಎಷ್ಟು ಎಂದು ನೀವೇನಾದರೂ ಲೆಕ್ಕ ಕೊಟ್ಟರೆ ಒಂದು ಸಾವಿರ ಕೋಟಿ ರೂಪಾಯಿ deficit

ಆಗುತ್ತದೆಂದು ನಾನು ಮಾನ್ಯ ಸಿದ್ದರಾಮಯ್ಯನವರ ಗಮನಕ್ಕೆ ತರುತ್ತಿದ್ದೇನೆ. ಬಹುಶಃ ರಾಜ್ಯದ ಇತಿಹಾಸದಲ್ಲಿ ನೀವೇನಾದರೂ ಅಂಕಿಅಂಶಗಳನ್ನು ಆರ್ಥಿಕ ಇಲಾಖೆಯವರ ಮುಖೇನ ಪ್ರಾಮಾಣಿಕವಾಗಿ ನಮಗೆ ತಿಳಿಸುವಂಥ ಪ್ರಯತ್ನ ಮಾಡಿದರೆ ನಿಮ್ಮ surplus ಎಂದು ಹೇಳುವಂಥದ್ದು ಇದು ಬೋಗಸ್. ಅರ್ಥ ಇಲ್ಲದೇ ಇರುವಂಥದ್ದು ಎಂದು ಗೊತ್ತಾಗುತ್ತದೆ. ಯಾವಾಗ ಒಂದು ಬಜೆಟ್‌ಗೆ ಗೌರವ ಬರುತ್ತದೆ. ಮನ್ನಣೆ ಬರುತ್ತದೆ ಎಂದರೆ. ಒಂದು ಸಾಲಿನಲ್ಲಿ ನೀವು ಎಷ್ಟು ನಿಗದಿ ಮಾಡಿದ್ದೀರಿ. ಎಷ್ಟು ಖರ್ಚು ಮಾಡಿದ್ದೀರಿ ಎನ್ನುವ ಆ ಅಂಕಿಅಂಶಗಳನ್ನು ಕೊಟ್ಟಾಗ ಅದಕ್ಕೆ ಮನ್ನಣೆ ಸಿಗುತ್ತದೆ. ಇವತ್ತು ಹೇಗೂ ನಾವು ಮಾರ್ಚ 17ನೇ ತಾರೀಖಿನಲ್ಲಿದ್ದೇವೆ. ಮಾರ್ಚ್ 1ನೇ ತಾರೀಖಿನವರೆಗೆ. ಸಂಪೂರ್ಣ ಅಂಕಿಅಂಶಗಳನ್ನು ನೀವು ನಮಗೆ ಕೊಡಿ. ಆವಾಗ ನೀವು ಎಲ್ಲಿದ್ದೀರಿ ಎನ್ನುವುದು ಗೊತ್ತಾಗುತ್ತದೆ. ಮಾನ್ಯ ಸಿದ್ದರಾಮಯ್ಯನವರು ತೆರಿಗೆಯನ್ನು ಸಂಗ್ರಹಿಸುವ ಸಲುವಾಗಿ ಪ್ರಾಮಾಣಿಕ ಪ್ರಯತ್ನವನ್ನು ಮಾಡಿರುವುದಕ್ಕೆ ನಾನು ಅವರನ್ನು ಅಭಿನಂದಿಸುತ್ತೇನೆ. ಆದರೆ ವಾಸ್ತವಿಕವಾಗಿ ಮಂಜೂರಾದ ಹಣ ಸರಿಯಾಗಿ ಖರ್ಚಾಗುವಂತೆ ನೋಡಿಕೊಳ್ಳಬೇಕಾದದ್ದು ಸರಿಯಾಗಿ ವಿನಿಯೋಗವಾಗುವಂತೆ ನೋಡಿಕೊಳ್ಳಬೇಕಾದದ್ದು, ಗ್ರಾಮೀಣಾಭಿವೃದ್ಧಿಗೆ ಹಿಂದುಳಿದ ವರ್ಗದ ಜನರ ಅಭಿವೃದ್ಧಿಗೆ ಖರ್ಚಾಗ ಬೇಕಾದ ಹಣ ಖರ್ಚಾಗಲಿಲ್ಲವೆಂದು ಹೇಳಿದರೆ ಬಹುಶಃ ಇದಕ್ಕೆ ಅರ್ಥವಿಲ್ಲ ಎನ್ನುವ ಮಾತನ್ನು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

"ಗ್ರಾಮೀಣ ಪ್ರದೇಶದ ಜನರ ಜೀವನ ಮಟ್ಟದ ಅಭಿವೃದ್ಧಿಗಾಗಿ ವಿಶ್ವಬ್ಯಾಂಕಿನವರ ಮೂರು ಯೋಜನೆ ಜಾರಿಯಲ್ಲಿದೆ"

ಎಂದು ಮಾನ್ಯ ಸಿದ್ದರಾಮಯ್ಯನವರು ಹೇಳಿದ ಮಾತು 2004-05ರ ಬಜೆಟ್‌ನಲ್ಲಿ ಪುಟ ಸಂಖ್ಯೆ 16 ಪ್ಯಾರಾ ಸಂಖ್ಯೆ: 49ರಲ್ಲಿದೆ " ರೂ.690 ಕೋಟಿಯ ಜಲಾನಯನ ಯೋಜನೆ. ರೂ.670 ಕೋಟಿಗಳ ಕೆರೆ ನಿರ್ವಹಣೆ ಯೋಜನೆ. ರೂ.1035 ಕೋಟಿಗಳ ಗ್ರಾಮೀಣ ನೀರು ಸರಬರಾಜು ಯೋಜನೆ ಅನುಷ್ಠಾನಗೊಳ್ಳುತ್ತಿವೆ. ಈ ಯೋಜನೆಗಳ ಪ್ರಗತಿ ತೀರಾ ನಿರಾಶಾದಾಯಕವಾಗಿದೆ. ಕಳೆದ ಎರಡು ವರ್ಷಗಳಲ್ಲಿ ಶೇಕಡ 10 ರಷ್ಟು ಕಡಿಮೆ ಹಣ ತ್ವರಿತ ಅನುಷ್ಠಾನಕ್ಕೆ ಆದ್ಯತೆ ರೀತಿಯಲ್ಲಿ ಮಾಡಲಿಲ್ಲ"

ನಾನು ಇವತ್ತು ನಿಮ್ಮನ್ನು ಕೇಳುವುದೇನೆಂದರೆ ಹಿಂದಿನ ಸರ್ಕಾರ ತ್ವರಿತಗತಿಯಲ್ಲಿ ಪ್ರಗತಿ ಕಾಣುವುದಕ್ಕೆ ಕ್ರಮ ಕೈಗೊಳ್ಳಲಿಲ್ಲ. ನಾನು ಕ್ರಮ

ತೆಗೆದುಕೊಳ್ಳುತ್ತೇನೆಂದು ನಿಮ್ಮ ಭಾಷಣದಲ್ಲಿ ಹೇಳಿದ್ದೀರಲ್ಲಾ. ಪ್ರೋಗ್ರೆಸ್ ಏನು ಮಾಡಿದ್ದೀರೆನ್ನುವುದನ್ನು ಹೇಳಿ. ಕಳೆದ 10 ತಿಂಗಳಲ್ಲಿ ಈ ಸರ್ಕಾರದ ಪ್ರೋಗ್ರೆಸ್ ಏನು? ಕರ್ನಾಟಕದ ಜಲಸಂವರ್ಧನೆ ಯೋಜನೆಗೆ ಜೂನ್ 2002ರಿಂದ ಪ್ರಾರಂಭವಾಗಿ ಐದು ವರ್ಷದಲ್ಲಿ ಈ ಯೋಜನೆ ಮುಗಿಯಬೇಕು. Total project cost Rs.670.59 crores. ಇದರಲ್ಲಿ World Bank Loan Rs. 530.18 crores. Government of Karnataka share Rs. 114.13 crore 6 percent community contribution. ಒಟ್ಟು ಈ ಯೋಜನೆಯಲ್ಲಿ ಬರಗಾಲದಿಂದ ತತ್ತರಿಸಿ ಹೋಗಿರುವಂಥ ಒಣಗಿರುವಂಥ ಕೆರೆಗಳ ಹೂಳು ತೆಗೆಯುವಂಥದ್ದು ಶ್ರೀ ಕುಮಾರ ಬಂಗಾರ್ಪನವರಿಂದ ಆ ಇಲಾಖೆಯನ್ನು ಕಿತ್ತುಕೊಂಡು ನಮ್ಮ ಹಿರಿಯ ಸಚಿವರಾದಂಥ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರಿಗೆ ಏನಾದರೂ ಪ್ರೋಗ್ರೆಸ್ ಮಾಡಬಹುದೆಂದು ಕೊಟ್ಟರು. ಆದರೆ ನಾನು ಇವತ್ತು ನಿಮ್ಮನ್ನು ಕೇಳುವುದೇನೆಂದರೆ ಇದುವರೆಗೆ ಹೂಳೆತ್ತುವುದಕ್ಕೆ ಕೈಗೆತ್ತಿಕೊಂಡಿರುವ ಕೆರೆಗಳ ಸಂಖ್ಯೆ 2004ರಲ್ಲಿ ಕೇವಲ 300. ನನಗೆ ಸಿಕ್ಕಿರುವ ಮಾಹಿತಿ ಪ್ರಕಾರ ಅದರಲ್ಲಿ ಕಂಪ್ಲೀಟ್ ಆಗಿರುವುದು ಕೇವಲ 39 ಕೆರೆಗಳು. ಇದರಲ್ಲಿ ಪ್ರಗತಿ ಶೇಕಡ 2ರಷ್ಟು ಆಗಿದೆ. ಅದಾದಮೇಲೆ ಜನವರಿ 2005ರವರೆಗೆ ಖರ್ಚಾಗಿರುವ ಹಣ ಕೇವಲ ರೂ.49 ಕೋಟಿ 2 ಲಕ್ಷ ಅವರು ಏನು ಹೇಳಿದರೆಂದರೆ. "ನಾನು ಬರುತ್ತೇನೆ. ಹಿಂದೆ ಪ್ರೋಗ್ರೆಸ್ ಸರಿಯಿಲ್ಲ. ನಾನು ಮಾಡಿ ತೋರಿಸುತ್ತೇನೆ" ಎಂದು ಹೇಳಿದರಲ್ಲಾ. ಹಾಗಾದರೆ ಅಂಕಿಅಂಶವನ್ನು ಕೊಡಿ. ಇಲ್ಲಿ ಚರ್ಚೆಯಾಗುವ ರೀತಿ ಹೇಗಿರುತ್ತದೆ ಎಂದರೆ 'ಈ ಕಡೆ ಯಡಿಯೂರಪ್ಪ ಮತ್ತು 20–25 ಜನ ವಿರೋಧ ಪಕ್ಷದಲ್ಲಿ ಕುಳಿತುಕೊಂಡು ಮಾತನಾಡುತ್ತೇವೆ. ತಿಳಿದಿರುವುದನ್ನು ಅಷ್ಟು ಹೇಳಿ ಹೋಗುತ್ತೇವೆ' ಇದಿಷ್ಟೇ ಆಗಿದೆ ಹೊರತು ಅಂಕಿಅಂಶಗಳನ್ನು ಇಟ್ಟುಕೊಂಡು ದಾಖಲೆ ಸಹಿತ ಹೀಗೆ ಹೇಳಿದಿರಿ ಯಡಿಯೂರಪ್ಪನವರೆ. ಇದು ಸರಿಯಲ್ಲ. ಇದು ಹೀಗೆ ಮಾಡಿದ್ದೇನೆ. ಇಲ್ಲಿ ನೋಡಿ' ಎಂದು ಸರ್ಕಾರದಿಂದ ಉತ್ತರ ಕೊಡುವಾಗ ಹೇಳುತ್ತಾರೆಯೇ? ಇಲ್ಲ. ಆ ಪದ್ಧತಿಗಳು ನಮ್ಮಲ್ಲಿ ಇಲ್ಲ. ಅದಕ್ಕೆ ನಾನು ಇದನ್ನು ಬೇರೆ ಕಡೆಗೆ divert ಮಾಡಲಿಕ್ಕೆ ಹೋಗಲೇ ಇಲ್ಲ. ಅದಕ್ಕೋಸ್ಕರ ನೇರ ಅಂಕಿಅಂಶಗಳನ್ನು ನಾನು ಹೇಳುತ್ತಿದ್ದೇನೆ. ಇಲ್ಲಿಯವರೆಗೆ World bank account ನಿಂದ ಖರ್ಚು ಆಗಿರುವಂಥದ್ದು ರೂ.680 ಕೋಟಿ 59 ಲಕ್ಷದಲ್ಲಿ ಕೇವಲ 49 ಕೋಟಿ ಮಾತ್ರ ಖರ್ಚಾಗಿದೆ. ಈ ಯೋಜನೆ 5 ವರ್ಷದಲ್ಲಿ ಮುಗಿಯಬೇಕಾಗಿದ್ದು ಈಗಾಗಲೇ ಮೂರು ವರ್ಷ ಕಳೆದಿದೆ. ಇದರಿಂದ ಈ ಸರ್ಕಾರ ನಡೆದುಕೊಳ್ಳುವಂಥ ರೀತಿ ಗೊತ್ತಾಗುತ್ತದೆ. ಹಾಗೆಯೇ ಈ ಖರ್ಚಾಗಿರುವ ಹಣದಲ್ಲಿ ಸಹ 60 percent

consultant fee ಮತ್ತು administration ಸಲುವಾಗಿ ನಿಮ್ಮ ಇಲಾಖೆಗೆ ಖರ್ಚು ಮಾಡಿರುವಂಥದ್ದು On the record under JSY you are showing 102 tanks have been completed. but actually only 39 tanks have been completed. ಕರ್ನಾಟಕ ಸರ್ಕಾರ ಒಟ್ಟು ರೂ. 670 ಕೋಟಿ 59 ಲಕ್ಷದ ಈ ಯೋಜನೆ ವೆಚ್ಚದಲ್ಲಿ ಪ್ರತಿವರ್ಷ 100 ರಿಂದ 120 ಕೋಟಿಯಂತೆ ಇದುವರೆಗೆ ರೂ.350 ಕೋಟಿ ಖರ್ಚು ಮಾಡಬೇಕಾಗಿತ್ತು. Not even 50 crore is spent. ಸರ್ಕಾರಕ್ಕೆ ಏನಾಗಿದೆ ? ಹೀಗೆ ಏಕೆ ಮಾಡುತ್ತಿದ್ದೀರಿ ? 'ಸ್ವಜಲಧಾರಾ ಯೋಜನೆಯಲ್ಲಿ' ಕೇಂದ್ರ ಸರ್ಕಾರ ನೆರವು ಕೊಟ್ಟರೂ ಸಹ ರಾಜ್ಯ ಸರ್ಕಾರ ಹಣ ಖರ್ಚು ಮಾಡುವುದಕ್ಕೆ ತಯಾರಿಲ್ಲ. ಈ ವಿಷಯ ಕುರಿತು ಲೋಕಸಭೆಯಲ್ಲಿ ಮೂರು ದಿವಸದ ಹಿಂದೆ ಉತ್ತರ ಕೊಟ್ಟಿದ್ದಾರೆ. 2002–03ರಲ್ಲಿ ರೂ.1 ಕೋಟಿ 61 ಲಕ್ಷ ಬಿಡುಗಡೆಯಾಗಿದ್ದರೆ ಅದರಲ್ಲಿ ಕೇವಲ ರೂ. 40 ಲಕ್ಷ ಮಾತ್ರ ಉಪಯೋಗಿಸಿಕೊಳ್ಳಲಾಗಿದೆ. 2003–04ರಲ್ಲಿ ರೂ.8 ಕೋಟಿ 99 ಲಕ್ಷ ಕೇಂದ್ರದಿಂದ ಬಂದಿದ್ದು ಅದರಲ್ಲಿ ಖರ್ಚಾದದ್ದು ರೂ.1 ಕೋಟಿ 75 ಲಕ್ಷ. 2004–05ರಲ್ಲಿ ರೂ.9 ಕೋಟಿ 40 ಲಕ್ಷ ಬಂದಿದ್ದು ಅದರಲ್ಲಿ ಖರ್ಚು ಒಂದು ಪೈಸೆ ಕೂಡ ಆಗಲಿಲ್ಲ. ಇದು ಸ್ವಜಲಧಾರಾ ಯೋಜನೆಯಲ್ಲಿ. ರಾಜ್ಯ ಸರ್ಕಾರ ಉದ್ಧಾರ ಮಾಡಿರುವಂಥದ್ದು! ಕೇಂದ್ರ ಸರ್ಕಾರ ಕುಡಿಯುವ ನೀರಿಗಾಗಿ 8–10 ಪ್ರಮುಖ ಪಟ್ಟಣಗಳಿಗೆ ರೂ.48 ಕೋಟಿಯನ್ನು ಕೊಟ್ಟಿದ್ದು. ಅದಕ್ಕೆ ರಾಜ್ಯ ಸರ್ಕಾರ matching grant ಕೊಟ್ಟು 31ರೊಳಗಾಗಿ ಇದನ್ನು ಕಂಪ್ಲೀಟ್ ಮಾಡಬೇಕು. Unfortunately, ಅದಕ್ಕೆ ಸರ್ಕಾರ administrative approval ಕೊಟ್ಟಿಲ್ಲ. matching grant ಕೊಡಲಿಲ್ಲ. 31ನೇ ತಾರೀಖಿಗೆ ಈ ಹಣ lapse ಆಗುತ್ತದೆ. ಬಡ್ಡಿ ಸಹಿತ ಕೇಂದ್ರ ಸರ್ಕಾರಕ್ಕೆ ರಾಜ್ಯಸರ್ಕಾರಂದವರು ವಾಪಸ್ಸು ಕೊಡಬೇಕಾಗುತ್ತದೆ. ನಾನು ಈ ಕುರಿತು ಮಾನ್ಯ ಮುಖ್ಯ ಮಂತ್ರಿಗಳಿಗೆ ಪತ್ರ ಬರೆದಿದ್ದೇನೆ. ಸರ್ಕಾರದಲ್ಲಿ surplus ಹಣ ಇದೆಯೆಂದು ನೀವು ಹೇಳುವಾಗ ಇದಕ್ಕೆ matching grant ಕೊಟ್ಟು ಮಾಡುವುದಕ್ಕೆ ನಿಮಗೆ ಏನಾಗಿದೆ? ಹೀಗೆ ಹಣವನ್ನು ಉಪಯೋಗಿಸಿಕೊಳ್ಳದೆ ವಾಪಸ್ಸು ಕಳುಹಿಸಿದರೆ ಇನ್ನು ಮುಂದೆ ರಾಜ್ಯ ಸರ್ಕಾರಕ್ಕೆ ಯಾರಾದರೂ ಹಣ ಕೊಡುತ್ತಾರೆಯೇ? ಕೇಂದ್ರ ಸರ್ಕಾರ ಅನುಮತಿ ಕೊಟ್ಟು ಹಣ ಬಿಡುಗಡೆ ಮಾಡಿದ ಮೇಲೆ matching grant ಕೊಡುವುದಕ್ಕೆ ತಡವಾದರೆ ಕಡೆ ಪಕ್ಷ administrative approval ಕೊಟ್ಟು ಕೆಲಸವನ್ನಾದರೂ ಮಾಡಿಸಬಹುದಲ್ಲವೇ? ನಾಳೆ ಬೆಳಿಗ್ಗೆಯೇ ನೀವೇನು ಹಣವನ್ನು ಖರ್ಚು ಮಾಡುವುದಿಲ್ಲ. ಆ ಹಣ ಕೇಂದ್ರ ಸರ್ಕಾರಕ್ಕೆ ವಾಪಸ್ಸು ಹೋಗುತ್ತದೆ. ಇದನ್ನು ಬಡ್ಡಿ ಸಹಿತ ವಾಪಸ್ಸು ಕೊಟ್ಟರೆ ಈ

ರಾಜ್ಯ ಸರ್ಕಾರಕ್ಕೆ ಅವಮಾನವಾಗುವುದಿಲ್ಲವೇನು? 2002-03 ಮತ್ತು 2004-05 ರಲ್ಲಿ ಜಲಸಂವರ್ಧನಾ ಯೋಜನೆಗೆ ರೂ.117 ಕೋಟಿ 67 ಲಕ್ಷ ಗುರಿ ನಿಗದಿ ಮಾಡಿದ್ದರೆ ಇದುವರೆಗೆ ಖರ್ಚಾಗಿರುವುದು ರೂ 59 ಕೋಟಿ 39 ಲಕ್ಷ ಮಾತ್ರ. ಈ ಮಾಹಿತಿ ನಿಮ್ಮ ಕಚೇರಿಯ ಪತ್ರದ ಮುಖೇನ ಬಂದಿರುವಂಥದ್ದು ಈ KPTCL ಇವರನ್ನು ದೇವರೇ ಕಾಪಾಡಬೇಕು. ನಮ್ಮನ್ನು ಹಾಳು ಮಾಡುವುದಕ್ಕೆ ಈ ಇಲಾಖೆ ಹುಟ್ಟಿಕೊಂಡಿದೆಯೋ ಏನೋ ಗೊತ್ತಿಲ್ಲ. ಈಗಾಗಲೇ ಕೆಲವು ಸಂಗತಿಗಳನ್ನು ಹೇಳಿದ್ದೇನೆ. ವಿದ್ಯುತ್ ಕ್ಷೇತ್ರದ ಬಗ್ಗೆ detail ಆಗಿ ಹೇಳುವುದಿಲ್ಲ. 'ಗ್ರಾಮೀಣ ಜನರಿಗೆ, ನಗರಪ್ರದೇಶದ ಜನರಿಗೆ. ರೈತರ ಪಂಪುಸೆಟ್ಟುಗಳಿಗೆ ಪ್ರತಿನಿತ್ಯ ಇಷ್ಟು ಗಂಟೆ ಸರಿಯಾಗಿ ವಿದ್ಯುತ್ ಕೊಡುತ್ತೇವೆನ್ನುವ ಕ್ಯಾಲೆಂಡರ್ ಅನೌನ್ಸ್‌ಮೆಂಟ್ ಎಲ್ಲಿ ಆಯಿತು" ವೇಳಾಪಟ್ಟಿ ಪ್ರಕಟ ಮಾಡಿದರು. 'ಅಂಗೈನಲ್ಲಿ ಆಕಾಶ ತೋರಿಸುತ್ತಾ ಬಂದಿರಿ' ಗ್ರಾಹಕರಿಗೆ ಭರವಸೆ ಕೊಟ್ಟಂತೆ ಒಂದು ಯೂನಿಟ್ ವಿದ್ಯುತ್ ಸಹ ನೀವು ಕೊಡಲಿಲ್ಲ. ಯಾವ ಸಮುದಾಯಕ್ಕೂ ಸರ್ಕಾರದಿಂದ ನೀವು ಹೇಳಿದಂತೆ ವಿದ್ಯುತ್ ಅನ್ನು ಕೊಡಲಿಲ್ಲ. System improvment ಬಗ್ಗೆ ಏನೂ ಪ್ರಯತ್ನ ಮಾಡಲಿಲ್ಲ. ರೈತನ ಪಂಪುಸೆಟ್ಟುಗಳ ಬಗ್ಗೆ ಒಂದು ಲಕ್ಷ ಜನರಿಗೆ ಶ್ರೀ ದೇವೇಗೌಡ್ರು ಸ್ವತಃ ಅವರಿಗೆ ಆ ಅಧಿಕಾರ ಇತ್ತೋ. ಇಲ್ಲವೋ ಆ ಬಗ್ಗೆ ನಾನು ಪ್ರಶ್ನೆ ಮಾಡುವುದಿಲ್ಲ. ಮಾಜಿ ಪ್ರಧಾನಿಯಾಗಿದ್ದರು. ಅವರ ಬಗ್ಗೆ ನನಗೆ ಗೌರವವಿದೆ. ರೈತರ ಬಗ್ಗೆ ಅವರಿಗೆ ಒಂದಿಷ್ಟು ಕಳಕಳಿ ಇದೆ. ಎಲ್ಲದಕ್ಕೂ ನಾನು ಟೀಕೆ ಮಾಡುವುದಿಲ್ಲ. ಆದರೆ ಪಕ್ಕದಲ್ಲಿ ಸಿ.ಎಂ. ಈ ಕಡೆ ಮಾಜಿ ಪ್ರಧಾನ ಮಂತ್ರಿಗಳು. ಇನ್ನೊಂದು ಕಡೆ concerned minister ನಿಂತುಕೊಂಡು 'ನಿನ್ನ ತಲೆ ನೀನೇ ಬೋಳಿಸಿಕೋ ನಿನ್ನದೇ ಕತ್ತಿ' ಎನ್ನುವ ರೀತಿಯಲ್ಲಿ ರೈತರ ಅಕ್ರಮ ಪಂಪುಸೆಟ್ಟುಗಳನ್ನು ಸಕ್ರಮ ಮಾಡುತ್ತೇವೆನ್ನುವ ಘೋಷಣೆ ಮಾಡಿದರು. ಅರೆ. ಏನಾದರೂ ಲೈನ್ ಎಳೆದಿದ್ದಾರೆಯೇ? ವೈರ್ ಕೊಟ್ಟಿದ್ದಾರೆಯೇ? ಏನಾದರೂ transformer ಕೊಟ್ಟಿದ್ದಾರೆಯೇ? ಇಲ್ಲ. ಒಂದು transformer ಕೆಳಗಡೆ 8-10 ಪಂಪುಸೆಟ್ಟು ಇದ್ದರೆ ಅದು ಇಪ್ಪತ್ತು ಆಯಿತು. ಹೀಗಾಗಿ ನಿತ್ಯ ಒಂದೊಂದು transformerಗಳು ಸುಟ್ಟುಹೋಗುತ್ತಿವೆ. ಅವನೇನೋ ಹಣೆಬರಹ ಮಾಡಿಕೊಂಡು ಬರಗಾಲದಲ್ಲಿ ನೀರಿಲ್ಲದೆ ಸಾಯುತ್ತಿದ್ದಾನೆ. ಈಗ ಒಬ್ಬೊಬ್ಬ ಹತ್ತತ್ತು ಸಾವಿರ ರೂಪಾಯಿಗಳನ್ನು ಕೊಟ್ಟು ಅದನ್ನು ಅವನು ಖಾಯಂ ಮಾಡಿಕೊಳ್ಳಬೇಕು. ಅವನು ಯಾರಿಗೆ ಏಕೆ ದಂಡ ಕೊಡಬೇಕು? ನಿಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ – ಮೀಟರ್ ಹಾಕುವುದಿಲ್ಲ ಎಂದು ಹೇಳಿದ್ದೀರಿ. ವಿದ್ಯುತ್ ಫ್ರೀ ಆಗಿ ಕೊಡುತ್ತೇವೆಂದು ಹೇಳಿದ್ದೀರಿ' ಅದನ್ನೆಲ್ಲ ಕೊಟ್ಟು ಇವತ್ತು ಸರ್ಕಾರ ನಡೆಸುವುದು ಕಷ್ಟ ಎನ್ನುವುದು ಅರ್ಥವಾಗುತ್ತದೆ ಮಾನ್ಯ

ಸಿಂಧ್ಯಾರವರೆ. ಕೊನೆಯ ಪಕ್ಷ ಈ ಬರಗಾಲದಲ್ಲಿ ಸಿಕ್ಕಿರಬೇಕಾದರೆ. ಈ ನೀರಾವರಿ ಯೋಜನೆಗಳಿಗೆ ಸಾವಿರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡುವುದರಲ್ಲಿ ಒಣಭೂಮಿಯಲ್ಲಿ ಅವನೇನೂ ಒಂದು 5 ಹೆಚ್‌ಪಿ ಅಥವಾ 2 ಹೆಚ್‌ಪಿ ಪಂಪ್ ಹಾಕಿಕೊಂಡು ಸ್ವಲ್ಪ ತರಕಾರಿ ಬೆಳೆದುಕೊಂಡು ಒಂದಷ್ಟು ಬೆಳೆ ಬೆಳೆದುಕೊಂಡು. ಜಾನುವಾರುಗಳಿಗೆ ಮೇವು ಬೆಳೆದುಕೊಂಡು ಬದುಕುತ್ತೇನೆಂದರೆ. ನೀವು ಹತ್ತು ಸಾವಿರ ರೂಪಾಯಿಗಳನ್ನು ಕೊಡಿ ಎಂದು ಹೇಳಿದರೆ ಆ ರೈತರು ಎಲ್ಲಿಂದ ಕೊಡಬೇಕು? ಆ ಬೋರ್‌ವೆಲ್‌ಗಳೇ ವರ್ಕ್ ಆಗುತ್ತಿಲ್ಲ. ಆ ಬೋರ್‌ವೆಲ್ ನಡೆಯುತ್ತಿಲ್ಲ. ನೀವು ಸರಿಯಾದ ಲೈನ್ ಕೊಟ್ಟು, ಅನುಕೂಲ ಮಾಡಿಕೊಟ್ಟು ದುಡ್ಡು ಕಟ್ಟಯ್ಯ ಎಂದರೆ ಅವನು ಮಾಡುವುದಕ್ಕೆ ರೆಡಿ ಇದ್ದಾನೆ. ಅದಕ್ಕೆ 10 ಸಾವಿರ ರೂಪಾಯಿ ದಂಡ–ಗಿಂಡ ಮಾಡುವುದು ಅಗತ್ಯವಿಲ್ಲ. ಒಂದು ಸಾರಿ ಇಂಪ್ರೂವ್‌ಮೆಂಟ್ಸ್ ಮಾಡಿಕೊಟ್ಟು ಅನುಕೂಲ ಮಾಡಿಕೊಡುವ ಪ್ರಯತ್ನ ಮಾಡಿ. ಆ ಮಿನಿ ವಾಟರ್ ಸಪ್ಲೈಗೆ ಮತ್ತು ಪೈಪ್ಡ್ ವಾಟರ್ ಸಪ್ಲೈಗೆ ನೀವೇ ನಿಮ್ಮ ತಲೆಯನ್ನು ಬೋಳಿಸಿಕೊಳ್ಳಿ. ನೀವು ಉಸ್ತುವಾರಿಗೆ ಅಡ್ಮಿನಿಸ್ಟ್ರೇಷನ್ ಖರ್ಚು ಎಂದು 10 ಪರ್ಸೆಂಟ್ ಕೊಡಿ. ಎಷ್ಟು ಖರ್ಚಾಗುತ್ತದೆ ಅಷ್ಟೇ ಕೊಡಿ ಎಂದರೆ ನಾನು ಹೇಳುತ್ತೇನೆ. ಇದರ ಬಗ್ಗೆ ನಾವೆಲ್ಲರೂ ಸೀರಿಯಸ್ ಆಗಿ ತೆಗೆದುಕೊಳ್ಳದಿದ್ದರೆ ನಾಳೆ ನಾವು ವಾಪಸ್ ಹೋದ ಮೇಲೆ ಏಪ್ರಿಲ್ 1ನೇ ತಾರೀಖಿನಿಂದ ನಾನು ನಿಮಗೆ ಹೇಳುತ್ತೇನೆ ನೀವು ಬೋರ್‌ವೆಲ್ ಹೊಡೆಸಬೇಕು. ನಮಗೇನು ಇಲ್ಲಿ 50 ಲಕ್ಷ ರೂಪಾಯಿ ಕೊಟ್ಟಿದ್ದಾರೆ. ಆ ಬೋರ್‌ವೆಲ್ ತೆಗೆದರೂ ನೀವು ವಿದ್ಯುತ್ ಕೊಡುವುದಿಲ್ಲ. ಏಕೆಂದರೆ ಒಂದೊಂದು ಮಿನಿ ವಾಟರ್ ಸಪ್ಲೈಗೆ ಕನೆಕ್ಷನ್ ಮಾಡುವುದಕ್ಕೆ ವೈರ್ ಹಾಕುವುದಕ್ಕೆ ಕಂಬ ಹಾಕುವುದಕ್ಕೆ ನಿಮಗೆ 3–4 ಲಕ್ಷ ರೂಪಾಯಿ ಬೇಕು. ಯೋಜನೆಗೆ 50 ಸಾವಿರ ರೂಪಾಯಿ ಖರ್ಚು ಮಾಡಿದರೆ ವಿದ್ಯುತ್ ಸಂಪರ್ಕ ತೆಗೆದುಕೊಳ್ಳುವುದಕ್ಕೆ 2 ಲಕ್ಷ ರೂಪಾಯಿ ಬೇಕು. ಈ ಪುಣ್ಯಾತ್ಮರು ಈ ಕೆಪಿಟಿಸಿಎಲ್ ಮೆಸ್ಕಾಂ, ಎಸ್ಕಾಂ ಇವೆಲ್ಲ ಆದಮೇಲೆ ಇವರು ಅಲ್ಲೆಲ್ಲೋ ಕುಳಿತುಕೊಂಡು ಮಾಡುತ್ತಿರುವ ದರ್ಬಾರು ಇದು. ಅಂದರೆ ತುಘಲಕ್ ದರ್ಬಾರು ಹೇಗೆ ಇದನ್ನು ಸಹಿಸೋಣ ಅಂತ? ಯಾರು ಇದನ್ನು ಒಪ್ಪಿದವರು? ನಿಮಗೇನಾದರೂ ಇದರ ಬಗ್ಗೆ ಕೇಳುವವರು.... ಇನ್ನು ಮೇಲೆ ರೈತನ ಪರಿಸ್ಥಿತಿ..... ಯಾವನೋ ಐಎಎಸ್ ಐಪಿಎಸ್ ಮಾಡಿಕೊಂಡು ಬಂದವನು. ತಣ್ಣನೆಯ ಗಾಳಿಯಲ್ಲಿ ಕುಳಿತುಕೊಂಡು ಅವನು ಹೇಳಿದ್ದನ್ನು ಕೇಳಿಕೊಂಡು ಇರುವುದಾದರೆ ಚುನಾಯಿತ ಪ್ರತಿನಿಧಿಗಳು ಚುನಾಯಿತ ಸರ್ಕಾರ ಮಂತ್ರಿಗಳು ಏಕ್ರೀ ಬೇಕು? ಯಾರಿಗೋಸ್ಕರ ಬೇಕು? ಅವನು ಹೇಳುವುದನ್ನು ಕೇಳುವುದಾದರೆ ನೀವ್ಯಾಕ್ರಿ

ಬೇಕು? ನಾವ್ಯಾಕ್ರಿ ಬೇಕು? ವಾಸ್ತವಿಕ ಸ್ಥಿತಿಯನ್ನಾದರೂ ನೀವು ನೋಡಿಕೊಳ್ಳಬೇಕಲ್ಲವೇ? ಇದು ನಮಗೇನೂ ಅರ್ಥವಾಗುತ್ತಿಲ್ಲ ಸ್ವಾಮಿ. ಅದು ಏನು ಮಾಡಬೇಕೂಂತ ಇದ್ದೀರೋ ಮಾಡಿ. 10 ಪರ್ಸೆಂಟ್ ಸೂಪರ್‌ವಿಷನ್ ಚಾರ್ಜ ಕೊಡಬೇಕು. ಇನ್ನು ಒಂದು ಯೂನಿಟ್ ಪವರ್ ಜಾಸ್ತಿ ತರುವುದಕ್ಕೆ ಪ್ರಯತ್ನವಾಗಲಿಲ್ಲ. ಆ ಡೀಟೇಲ್ಸ್‌ಗೆ ಹೋಗುವುದಕ್ಕೆ ನಾನು ಇಲಾಖೆವಾರು ಚರ್ಚೆ ಸಂದರ್ಭದಲ್ಲಿ ಹೇಳುತ್ತೇನೆ. ಕೊನೆಯದಾಗಿ ಒಂದೆರಡು ಮೂರು ರಿಲೀಫ್ ಅನ್ನು ಕೊಡುವುದಾದರೆ ಸಿಂಧ್ಯರವರೆ ಬರೆದುಕೊಂಡು ಅವರಿಗೆ ತಿಳಿಸಿ. ಅದು ನಿಮಗೆ ಸಂಬಂಧಪಟ್ಟದ್ದು. ಒಂದು ಹಿರಿಯ ಸಚಿವರಾದ ಸಿಂಧ್ಯರವರ ಗಮನಕ್ಕೆ ತರುತ್ತೇನೆ. ಇಂದಿರಾ ಆವಾಸ್ ಮನೆಗಳಿಗೆ ಒಂದು ಸಾವಿರಕ್ಕೆ 5 ರೂಪಾಯಿ 15 ಪೈಸೆಯಂತೆ ಒಂದು ಮನೆಗೆ ಸುಮಾರು 130 ರೂಪಾಯಿಗಳನ್ನು ಫೀಸ್ ಒಬ್ಬನಿಗೆ ಮತ್ತು 200 ಫೀಸ್ ಮತ್ತು 130 ರೂಪಾಯಿ ಒಟ್ಟು 330 ರೂಪಾಯಿ ಖರ್ಚಾಗುತ್ತದೆ. ಇಂದಿರಾ ಆವಾಸ್ ಮನೆಯನ್ನು ಸಬ್-ರಿಜಿಸ್ಟ್ರಾರ್ ಆಫೀಸಿನಲ್ಲಿ ರಿಜಿಸ್ಟರ್ ಮಾಡಿದರೆ ಇಷ್ಟು ಖರ್ಚಾಗುತ್ತದೆ. ಇದನ್ನು ಫ್ರೀ ಮಾಡಿ. ಆ ಬಡವ ಎಲ್ಲಿಂದ ಕೊಡಬೇಕು? ದಯವಿಟ್ಟು, ಇದನ್ನು ಕಡಿಮೆ ಮಾಡುವುದಕ್ಕಾದರೆ ಮಾಡಿಕೊಡಿ. ಕೆಂಪು ಮತ್ತು ಬಿಳಿ ಅಡಿಕೆಗೆ ಮಾರ್ಕೆಟ್ ಸಪೋರ್ಟ ಪ್ರೈಸ್ ಎಂದು ಹೇಳಿ....

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ ;- ರಿಜಿಸ್ಟ್ರೇಷನ್‌ಗೆ ದಾಖಲೆ ಬೇಕೆಂದರೆ ಕೊಡುವುದಕ್ಕೆ ಯಾವ ರೀತಿ ದಾಖಲೆಗಳಿಲ್ಲವೋ ಜಾಗವನ್ನು ಅವರಿಗೆ ಕೊಡುವುದಕ್ಕೆ ಪುನಃ ದಾಖಲೆಗಳನ್ನು ಕೊಡುವುದಕ್ಕೆ ರಿಜಿಸ್ಟ್ರೇಷನ್ ಮಾಡಬೇಕೆಂದು ಕಂಡೀಷನ್ ಹಾಕಿದ್ದಾರೆ. ಅದು ತಪ್ಪು. ಅದನ್ನು ತೆಗೆಯಬೇಕು. ತಾವು ಎಲ್ಲವನ್ನು ತೆಗೆಯಬೇಕಾಗುತ್ತದೆ. ರಿಜಿಸ್ಟ್ರೇಷನ್ ಅನ್ನೂ ತೆಗೆಯಬೇಕು. ಉದ್ದೇಶವಿದ್ದದ್ದು. ಯಾರಿಗೆ ಸ್ವತಃ ಜಾಗವಿಲ್ಲ. ಅವರಿಗೆ ಕೊಡುವಂಥದ್ದು. ಅದಕ್ಕೆ ಈ ಹೊಸ ಒಂದು ವ್ಯವಸ್ಥೆಯನ್ನು ಮಾಡಿದ್ದರು. ತಪ್ಪಾಗುತ್ತದೆ. ಅದನ್ನು ಬದಲಾಯಿಸಲು ಪ್ರಯತ್ನ ಮಾಡಬೇಕು. ಈಗ ಆರ್‌ಟಿಸಿ ಬೇಕೆಂದು ಹೇಳುತ್ತಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ ;- ಇನ್ನೊಂದು ತಾಂತ್ರಿಕ ದೋಷವಾಗಿದೆ. ಅವರೇನಾದರೂ ಸರ್ವೆ ನಂಬರ್‌ನಲ್ಲಿ ಸೈಟ್ ಇದ್ದರೆ. ಗ್ರಾಮ ಪಂಚಾಯಿತಿ ಕಾರ್ಯದರ್ಶಿಗಳು ಸರ್ಟಿಫೈ ಮಾಡಿಕೊಡುವ ಹಾಗಿಲ್ಲ. ಇದನ್ನು ರಿಜಿಸ್ಟ್ರೇಷನ್‌ಗೆ ಬರುವುದಿಲ್ಲವೆಂದು ಸ್ಪಷ್ಟವಾಗಿ ಬರೆದುಕೊಟ್ಟು ಬಿಡುತ್ತಾರೆ. ನೀವು ರೆವಿನ್ಯೂ ಸೆಕ್ರೆಟರಿ ಬರೆಸಿಕೊಡುವುದಕ್ಕೆ ಆದೇಶ ಕೊಡಲಿಲ್ಲ. ಇವತ್ತು ಗ್ರಾಮ ಪಂಚಾಯಿತಿ ಸೆಕ್ರೆಟರಿಯೂ ಕೊಡುತ್ತಿಲ್ಲ. ಹಳ್ಳಿಗಳಲ್ಲಿ ಯಾವುದಾದರೂ ಸೈಟ್ ಅನ್ನು ರಿಜಿಸ್ಟರ್ ಮಾಡಿಸುವುದು

ಬಹಳ ತೊಂದರೆಯಾಗಿಬಿಟ್ಟಿದೆ. ಇದೆಲ್ಲ ವಿಲೇಜ್ ಅಕೌಂಟೆಂಟ್ ಮಾಡಬೇಕಾದ ಕೆಲಸ. ಅವನಿಗೂ ಎನ್ಸ್ಟ್ರಸ್ಟ್ ಮಾಡಿಲ್ಲ. ಗ್ರಾಮ ಪಂಚಾಯಿತಿ ಸೆಕ್ರೆಟರಿ ಬಹಳ ಸ್ಪಷ್ಟವಾಗಿ ಇದು ದಾಖಲೆಗೋಸ್ಕರ ಬಿಟ್ಟಿರೋದು, ರಿಜಿಸ್ಟ್ರೇಷನ್‌ಗೆ ಅನ್ವಯವಾಗುವುದಿಲ್ಲವೆಂದು ಬರೆಯುತ್ತಾನೆ. ಹಾಗಾಗಿ ಅವರಿಗೆ ರಿಜಿಸ್ಟರ್ ಆಗುವುದಿಲ್ಲ. ಸುಮಾರು ಮನೆಗಳು ಮಾಡಿಕೊಳ್ಳಬೇಕಾದರೆ ರಿಜಿಸ್ಟರ್ ಆಗಲಿಲ್ಲವೆಂದರೆ ಎನ್ನುವ ಕಾರಣಕ್ಕೆ ಪೆಂಡಿಂಗ್ ಇವೆ ಅವು.

ಶ್ರೀ ಬಿ.ಎಸ್.ಯಡಿಯೂರಪ್ಪ:– ಅದಕ್ಕೋಸ್ಕರ ಆ ದಾಖಲೆಗಳು ಅನೇಕ ಸಂದರ್ಭದಲ್ಲಿ ಸಿಗುವುದೇ ಇಲ್ಲ. ಸಾಧ್ಯವೇ ಇಲ್ಲ. ಅದಕ್ಕೆ ಆ ಕನ್‌ಸಿಷನ್ ಕೊಟ್ಟು ಭಾರ ಬೀಳದ ಹಾಗೆ ನೋಡಿಕೊಳ್ಳಬೇಕು. ಕೆಂಪು ಮತ್ತು ಬಿಳಿ ಅಡಿಕೆಗೆ ಮಾರ್ಕೆಟ್ ಸಪೋರ್ಟ್ ಪ್ರೈಸ್ ಎಂದು ಹೇಳಿ 10 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುತ್ತೇವೆಂದು ಮುಖ್ಯಮಂತ್ರಿಗಳು ಹೇಳಿದ್ದರು. 10 ಕೋಟಿ ರೂಪಾಯಿ ಎಂದು ನೀವು ಹೇಳಿದ್ದೀರಿ. ಇದನ್ನು ಆವರ್ತ ನಿಧಿಯಿಂದ ಕೊಡುವಂಥದ್ದು ಮತ್ತು ವಾಪಸ್ಸು ಕೊಡುವಂಥದ್ದು. ಅದಕ್ಕೋಸ್ಕರ ಒಂದು ಕ್ಷಣ ತಡಮಾಡದೆ ಅದನ್ನು ಬಿಡುಗಡೆ ಮಾಡಿದರೆ ಅಡಿಕೆ ಬೆಳಗಾರರು ಬದುಕುತ್ತಾರೆ ಮತ್ತು ಸಪೋರ್ಟ್ ಪ್ರೈಸ್. ಎರಡೂ ಬೇರೆ ಬೇರೆ ಇದೆ ಸಾರ್. ಕೆಂಪು ಅಡಿಕೆಗೆ ನೀವು ಕನಿಷ್ಟ ದರ ಕೆಜಿ 100 ರೂಪಾಯಿ ಫಿಕ್ಸ್ ಮಾಡಿ. ಬಿಳಿ ಅಡಿಕೆಗೆ ಕೆಜಿಗೆ 75 ರೂಪಾಯಿ ಫಿಕ್ಸ್ ಮಾಡಿ. ಇವತ್ತು ಕೆಂಪಡಿಕೆಗೆ 75 ರೂಪಾಯಿ ಇದೆ. ಅದನ್ನು ನೂರು ರೂಪಾಯಿ ಮಾಡಿ. ಬಿಳಿ ಅಡಿಕೆಗೆ 50 ಇದೆ ಅದನ್ನು 75 ರೂಪಾಯಿ ಮಾಡಿದರೆ ಸ್ವಲ್ಪ ಅಡಿಕೆ ಬೆಳೆಗಾರರು ಬದುಕಿಕೊಳ್ಳುತ್ತಾರೆ ಎಂದು ಬೆಳೆಗಾರರ ದೃಷ್ಟಿಯಿಂದ ಈ ಒತ್ತಾಯವನ್ನು ಮಾಡುತ್ತಿದ್ದೇನೆ. ಸನ್ಮಾನ್ಯ ಸಿಂಧ್ಯಾರವರೆ. ತಮ್ಮ ಹತ್ತಿರ ಶ್ರೀಗಂಧದ ಎಣ್ಣೆ ಕಾರ್ಖಾನೆಯವರ ಒಂದು ಡೆಲಿಗೇಷನ್ ಕರೆದುಕೊಂಡು ಬಂದೆ. ಅದರಲ್ಲೇನಾಗಿದೆ ಎಂದರೆ, ಸಾವಿರಾರು ಜನ ಬೀದಿ ಪಾಲಾಗುತ್ತಿದ್ದಾರೆ ಮತ್ತು ಆ ಕರಕುಶಲ ಕೆಲಸ ಮಾಡುವಂಥ ಗಂಧದ ಇವರು ಸಹ ತೊಂದರೆಯಲ್ಲಿದ್ದಾರೆ. ಅವರಿಗೆ ಸ್ವಲ್ಪ ನೀವು ಅನುಕೂಲ ಮಾಡಿಕೊಡಿ. ಮಾನ್ಯ ಸಿದ್ದರಾಮಯ್ಯನವರ ಹತ್ತಿರ ಸಿಂಧ್ಯಾರವರು ಮಾತನಾಡಿದರೆ ಆಗುತ್ತದೆ. ಈ ಪೌಲ್ಟ್ರಿ ಫಾರಂ ಏನು ನಡೆಸುತ್ತಾರೆ. ಆಮೇಲೆ ಬ್ರಿಕ್ಸ್ ಇಂಡಸ್ಟ್ರಿ. ಸಣ್ಣ ಕೈಗಾರಿಕೆ ಮೂಲಕ ನಾವು ಸಬ್ಸಿಡಿ ಕೊಡುತ್ತೇವೆಂದು ಹೇಳಿ ಮುಂಡಾಮೋಚ ಅವನು ಯಾವನು ಅಧಿಕಾರಿ ಇದ್ದಾನೋ ಗೊತ್ತಿಲ್ಲ 10.15.20 ಪರ್ಸೆಂಟ್ ಲಂಚ ತಿಂದುಬಿಟ್ಟಿದ್ದಾನೆ. ಸಬ್ಸಿಡಿ ಸಿಗುತ್ತದೆ ಎಂದು ಪಾಪ..... ಆಗ ನಾನು 25 ಜನರನ್ನು ಕರೆದುಕೊಂಡು ಬಂದಿದ್ದೆ ಸಾರ್. ಆ ಸ್ಮಾಲ್‌ಸ್ಕೇಲ್

ಇಂಡಸ್ಟ್ರಿಯಲ್ಲೆ...... ಕಳೆದ 2 ವರ್ಷಗಳ ಹಿಂದೆ. ಇವರೇನು ಮಾಡಿದ್ದಾರೆಂದು ಡೀಟೇಲ್ಸ್ ಹೇಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ(ಭಾರಿ ಮಧ್ಯಮ ಮತ್ತು ಸಣ್ಣ ಕೈಗಾರಿಕೆ ಸಚಿವರು):– 2003ರ ನಂತರ ಸಬ್ಸಿಡಿ ಇಲ್ಲವೇ ಇಲ್ಲ. ಈಗ ನಾವು 1999ನಿಂದ 2003ವರೆಗೆ ಮಾತ್ರ ರಿಲೀಜ್ ಮಾಡಿರುವುದು. ಇದುವರೆಗೆ ಈ ಸರ್ಕಾರ ಬಂದ 8 ತಿಂಗಳಲ್ಲಿ ರಿಲೀಜ್ ಮಾಡಿರುವುದು 81 ಕ್ರೋರ್ಸ್. ಆ 81 ಕ್ರೋರ್ಸ್‌ನಲ್ಲಿ ಕೆಎಸ್‌ಎಫ್‌ಸಿಯಿಂದ ಸಾಲ ಯಾರು ತೆಗೆದುಕೊಂಡಿದ್ದರು. ಆ ಸಾಲ ಮಾತ್ರ ರಿಲೀಜ್ ಮಾಡಿರುವುದು. ಬೇರೆ ಯಾವುದೂ ಸಹ ರಿಲೀಜ್ ಆಗಿಲ್ಲ. ಆದುದರಿಂದ ಎಲ್ಲಿ ತಿಂದಿದ್ದಾರೆಂದು ಹೇಳಿದರೆ ನಾನು ವಿಚಾರಣೆ ಮಾಡುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ:– ಹೇಳುತ್ತೇನೆ. ನೀವು ಹೇಳಿದ ಹಾಗೆ. ಪೌಲ್ಟ್ರಿ ಫಾರಂನವರಿಗೆ ಮತ್ತು ಬ್ರಿಕ್ಸ್ ಇಂಡಸ್ಟ್ರಿಯವರಿಗೆ ಸಬ್ಸಿಡಿ ಕೊಡುತ್ತಿಲ್ಲ. ಇದು ಆಗ್ರೋ ಬೇಸ್ಡ್ ಇಂಡಸ್ಟ್ರಿ. ಈ ಪೌಲ್ಟ್ರಿ ಫಾರಂ ಮಾಡುವಂಥವರು ಸಬ್ಸಿಡಿ ಕೊಡುತ್ತಾರೆಂದು ಹೇಳಿ. ಹಿಂದೆ ಮಂಜೂರು ಮಾಡಿಸಿ ಆರ್ಡರ್ ಕೈಗೆ ಕೊಟ್ಟಿದ್ದಾರೆ. ನೀವು ಬಂದ ಮೇಲೆ ಸ್ವಲ್ಪ ಬಿಗಿಯಾಗಿದೆ. ಆದುದರಿಂದ ನಾನು ನಿಮ್ಮಲ್ಲಿ ವಿನಂತಿ ಮಾಡುವುದೇನೆಂದರೆ. ಈ ಪೌಲ್ಟ್ರಿ ಫಾರಂನವರಿಗೆ. ಬ್ರಿಕ್ಸ್ ಇಂಡಸ್ಟ್ರಿಗೆ ಸಬ್ಸಿಡಿ ಕೊಡುವಂಥ ವ್ಯವಸ್ಥೆ ಮಾಡಿ ಆ ಇಂಡಸ್ಟ್ರಿಗಳನ್ನು ಗ್ರಾಮೀಣ ಸಣ್ಣ ಇಂಡಸ್ಟ್ರಿಗಳನ್ನು ಉಳಿಸಬೇಕು. ಗ್ರಾಮ ದಳಪತಿಗಳಿಗೆ ಕರ್ನಾಟಕ ಗ್ರಾಮ ರಕ್ಷಣಾ ದಳ ಅಧಿನಿಯಮಿತ ನಿಯಮ 16ರಡಿಯಲ್ಲಿ ಅವರಿಗೆ ಅವಕಾಶವಿದೆ. ಅವರಿಗೊಂದು ಗೌರವ ಧನ ಕೊಡುವಂಥದ್ದು ಬಹಳ ದಿನಗಳಿಂದ ಪೆಂಡಿಂಗ್ ಇದೆ. ಪ್ರಾಮಿಸ್ ಮಾಡಿದ್ದೇವೆ. ಕೊಡುತ್ತೇವೆಂದು ಒಪ್ಪಿಕೊಂಡಿದ್ದೇವೆ. ಅವರು ಸುತ್ತುವರಿಯುವುದು ತಪ್ಪಲಿಲ್ಲ. ಅದಕ್ಕೆ ಅವರಿಗೆ ಅನುಕೂಲ ಮಾಡಿಕೊಡಬೇಕೆನ್ನುವ ಮಾತನ್ನು ಹೇಳುತ್ತೇನೆ. ನಾನು ಷಾರ್ಟ್ ಆಗಿ ಹೇಳಿದೆ. ಗುಡಿ ಕೈಗಾರಿಕೆಯಾದ ಗಾಣದೆಣ್ಣೆ ಉದ್ಯಮದ ಬಗ್ಗೆ ಹೇಳಿದೆ. ಈಗ ಗ್ರಾಮೀಣ ಭಾಗದ ಗುಡಿ ಕೈಗಾರಿಕೆ ಇದು. ಇದು ಮಹಾತ್ಮಗಾಂಧೀಜಿಯವರ ಕನಸಿನ ಉದ್ಯಮ. 1984ರಲ್ಲಿ ಎಸ್.ಆರ್. ಬೊಮ್ಮಾಯಿಯವರು ಇದಕ್ಕೆ ಸಂಪೂರ್ಣ ತೆರಿಗೆ ವಿನಾಯತಿಯನ್ನು ನೀಡಿದ್ದರು.

ಶ್ರೀ ಜೆ.ಸಿ. ಮಾಧುಸ್ವಾಮಿ:– ಗಾಣದೆಣ್ಣೆಯದು ಏನಾಗಿದೆ ಎಂದರೆ ಬೀಜವನ್ನು ಟ್ಯಾಕ್ಸ್ ಎಗ್ಜೆಂಪ್‌ಷನ್ ಮಾಡಿದ್ದಾರೆ. ಎಣ್ಣೆಗೆ ಟ್ಯಾಕ್ಸ್ ಬೀಳುತ್ತದೆ. ದಯಮಾಡಿ ಆ ಎಣ್ಣೆಯ ಮೇಲಿನ ಟ್ಯಾಕ್ಸ್ ತೆಗೆಯದೇ ಹೋದರೆ ಆ ಉದ್ಯಮ ಸರ್‌ವೈವ್

ಆಗುವುದಿಲ್ಲ. ಆ ಬೊಮ್ಮಾಯಿಯವರ ಕಾಲದಲ್ಲೇನು ಎಗ್ಜೆಂಪ್‌ಷನ್ ಇತ್ತು. ಅದನ್ನು ಕಂಟಿನ್ಯೂ ಮಾಡಿ ಸ್ವಲ್ಪ ಒತ್ತಾಯ ಮಾಡುತ್ತೇನೆ. ಅದನ್ನು ಮುಂದುವರಿಸುವುದಕ್ಕೇನಾದರೂ ಒಂದು ಕ್ರಮ ಜರುಗಿಸಬೇಕು. ಬೀಜದ ಮೇಲೆ ತೆಗೆದು ಎಣ್ಣೆ ಮೇಲೆ ಹಾಕುವುದರಿಂದ ಯಾವ ಪರ್ಪಸ್ ಸರ್ವ್ ಆಗುವುದಿಲ್ಲ.

ಶ್ರೀ ಅರಗ ಜ್ಞಾನೇಂದ್ರ(ತೀರ್ಥಹಳ್ಳಿ):- ಯಡಿಯೂರಪ್ಪನವರು ಮಾತನಾಡುವ ಸಂದರ್ಭದಲ್ಲಿ ಅಡಿಕೆ ಬಗ್ಗೆ ಹೇಳಿದರು. ಮಾನ್ಯ ಸಿಂಧ್ಯರವರು ದಯವಿಟ್ಟು ಗಮನಿಸಬೇಕು. ನಮ್ಮ ಅಡಿಕೆಗೆ ನೀವು ಬೆಂಬಲ ಬೆಲೆ ಕೊಡದಿದ್ದರೂ ಚಿಂತೆ ಇಲ್ಲ. ಒಂದು ಉಪಕಾರವನ್ನು ತಾವು ಮಾಡಬೇಕು. ಅಡಿಕೆ ಬೆಳೆಯುವಂಥ ರಾಜ್ಯ ನಮ್ಮದು. ನೂರಾರು ಕೋಟಿ ರೂಪಾಯಿ ಟ್ಯಾಕ್ಸ್‌ವತಿಯಿಂದ ಸರ್ಕಾರಕ್ಕೆ ಆದಾಯ ಬರುತ್ತದೆ. ದಯವಿಟ್ಟು ಸೆಂಟ್ರಲ್ ಫುಡ್ ಲಿಸ್ಟ್‌ನಲ್ಲಿ ನಮ್ಮ ಅಡಿಕೆ ಬಂದಿದೆ. ಆಹಾರ ಬೆಳೆ ಎಂದು ಹೇಳಿ ಆಹಾರ ಧಾನ್ಯದ ಲಿಸ್ಟ್‌ನಲ್ಲಿ ಈ ಅಡಿಕೆ ಬಂದಿದೆ. ಯಾರ ಕಾಲದಲ್ಲಿ ಯಾರು ಸೇರಿಸಿದರು. ಅದು ಯಾರ ಬುದ್ಧಿವಂತಿಕೆಯಿಂದ ಎಂಬುದು ನಮಗೆ ಗೊತ್ತಿಲ್ಲ. ಅಡಿಕೆ ಆಹಾರ ಧಾನ್ಯ ಹೇಗಾಗುತ್ತದೆ ನನಗೆ ಗೊತ್ತಿಲ್ಲ. ಪ್ರತಿನಿತ್ಯ ಒಂದೊಂದು ರಾಜ್ಯಗಳು ಅದರ ಮೇಲೆ ಸವಾರಿ ಮಾಡುತ್ತಿವೆ. ಫುಡ್ ಅಡಲ್ಟರೇಷನ್ ಆಕ್ಟ್ ಪ್ರಕಾರ ಅಡಿಕೆ ಮೇಲೆ ಕ್ರಮ ತೆಗೆದುಕೊಳ್ಳುವುದು. ಈ ಗುಟ್ಕಾ ಬ್ಯಾನ್ ಮಾಡುವುದು. ಅದು ಇದು. ಗುಟ್ಕಾ ಬ್ಯಾನ್ ಎನ್ನುವ ಒಂದು ಶಬ್ದ ಅಲ್ಲಿಂದ ಹೊರಟರೆ. ಇಲ್ಲಿ 3 ಸಾವಿರ ರೂಪಾಯಿ ಕಡಿಮೆಯಾಗುತ್ತದೆ. ಮಾನ್ಯ ಹಾರ್ಟಿಕಲ್ಚರ್ ಮಿನಿಸ್ಟರ್ ಇಲ್ಲೇ ಇದ್ದಾರೆ. ದಯವಿಟ್ಟು ಒಂದು ಟೀಂ ಮಾಡಿ. ನಾವು ಕೂಡ ವಿರೋಧ ಪಕ್ಷದವರು ಬರುವುದಕ್ಕೆ ತಯಾರಿದ್ದೇವೆ. ಸೆಂಟ್ರಲ್ ಗೌರ್ನಮೆಂಟ್ ಹತ್ತಿರ ಹೋಗೋಣ. ರಾಜ್ಯಕ್ಕೆ ಆದಾಯ ಬರುವಂಥ ಸಾವಿರಾರು ರೈತ ಕುಟುಂಬಗಳು ಬದುಕುವಂಥ ಇದು ಒಂದೊಂದು ಅಡಿಕೆ ಸೀಸನ್ ಬಂದ ಕೂಡಲೇ ಸಣ್ಣ ಸಣ್ಣ ಅಡಿಕೆ ಬೆಳೆಗಾರರಿಗೆ ದೊಡ್ಡ ಅಧೋಗತಿಯಾಗುತ್ತದೆ. ಅದರಿಂದಾಗಿ ಒಂದು ಟೀಂ ತೆಗೆದುಕೊಂಡು ಹೋಗಿ ಸೆಂಟ್ರಲ್ ಗೌರ್ನಮೆಂಟ್ ಹತ್ತಿರ ಹೋಗಿ ಆ ಫುಡ್ ಲಿಸ್ಟ್‌ನಿಂದ ಅಡಿಕೆಯನ್ನು ತೆಗೆಯಲಿಕ್ಕೆ ಪ್ರಯತ್ನ ಮಾಡಬೇಕು. ಇಲ್ಲದಿದ್ದರೆ ಫುಡ್ ಅಡಲ್ಟರೇಷನ್ ಆಕ್ಟ್ ಪ್ರಕಾರ ಕ್ರಮ ತೆಗೆದುಕೊಂಡ ಹಾಗಾಗುತ್ತದೆ. ಅದನ್ನು ತೆಗೆದು ಹಾಕಲಿಕ್ಕೆ ಒಂದು ವ್ಯವಸ್ಥೆ ಮಾಡಿ. ಆಗ ರೈತರಿಗೆ ರಕ್ಷಣೆ ಕೊಟ್ಟು ಹಾಗಾಗುತ್ತದೆ. ನಾರ್ಮಲ್ ಇದರಲ್ಲಿ ಮಾರ್ಕೆಟ್ ಹೋಗುತ್ತದೆ.

ಶ್ರೀ ಆರ್.ಶ್ರೀನಿವಾಸ(ತೋಟಗಾರಿಕೆ ಸಚಿವರು); ಸನ್ಮಾನ್ಯ ಅಧ್ಯಕ್ಷರೆ. ನಮ್ಮ ಗೌರವಾನ್ವಿತ ಸದಸ್ಯರು ಒಂದು ವಿಚಾರ ಪ್ರಸ್ತಾಪ ಮಾಡಿದರು. ಇದು ಕೇಂದ್ರ ಸರ್ಕಾರದಲ್ಲಿ ಕೂಡ ಕೃಷಿ ಇಲಾಖೆಯಲ್ಲಿ ಇರಬಹುದು. ಆದರೆ ರಾಜ್ಯ ಸರ್ಕಾರದಲ್ಲಿ ಅದು ತೋಟಗಾರಿಕೆ ಇಲಾಖೆಯಲ್ಲಿ ಇದೆ. ಅಲ್ಲಿ ಒಬ್ಬ ಜಾಯಿಂಟ್ ಡೈರೆಕ್ಟರ್‌ರವರನ್ನು ಇಟ್ಟಿದ್ದೇವೆ. ಅದು ಕೇಂದ್ರಸರ್ಕಾರದಲ್ಲಿ ಆಗಿದೆ. ಮತ್ತು ರಾಜ್ಯ ಸರ್ಕಾರದಲ್ಲಿ ಅದು ನಮ್ಮ ಇಲಾಖೆಯಲ್ಲಿ ಇರತಕ್ಕಂಥದ್ದು.

ಶ್ರೀ ಬಿ.ಎಸ್.ಯಡಿಯೂರಪ್ಪ:- ಈ ಗುಡಿ ಕೈಗಾರಿಕೆಯಾದ ಗಾಣಿ ಉದ್ಯಮವನ್ನು ನಮ್ಮ ಸಿದ್ದರಾಮಯ್ಯನವರೆ. ಆ ಕಚ್ಚಾ ಮಾರನ ಕುಸುರಿ ಮೇಲೆ ಇದ್ದಂಥ ತೆರಿಗೆಯನ್ನು ತೆಗೆದು ಹಾಕಿದ್ದರು. ಇದನ್ನು ದಯಮಾಡಿ ಮೌಲ್ಯವರ್ಧಿತ ತೆರಿಗೆ ವ್ಯಾಪ್ತಿಯಿಂದ ತೆಗೆದು ಹಾಕುವ ಪ್ರಯತ್ನ ಮಾಡಬೇಕೆಂದು ಹೇಳಿ, ಎಣ್ಣೆ ತೆಗೆಯುವಂಥ ಗಾಣಿ ಉದ್ಯಮ ಅದಕ್ಕೆ ಗಮನ ನೀಡಬೇಕು. ಈ ಸಾಲಿನ ಬಜೆಟ್‌ನ ಬಗ್ಗೆ ನಾನು ಬಹಳಷ್ಟು ವಿವರಕ್ಕೆ ಹೋಗಲಿಲ್ಲ. ಏಕೆಂದರೆ ಅದನ್ನು ಕಾರ್ಯರೂಪಕ್ಕೆ ತರುವಂಥ ಪ್ರಶ್ನೆಯೇ ಉದ್ಭವವಾಗುವುದಿಲ್ಲ. ಏಕೆಂದರೆ they are counting days. ಈ ಬಜೆಟ್ ಕೇವಲ ಮೂಗಿಗೆ ತುಪ್ಪ ಹಚ್ಚುವಂಥ ಬಜೆಟ್ ಮಾಡಿದಿರಿ. ಮತ್ತೊಂದು ವಿಷಯ ಏನೆಂದರೆ. ನಾನು ಬಹಳ ಹಿಂದೆ ಚುನಾವಣೆಗೆ ಹೋಗುವ ಸಿದ್ದತೆ ಎನ್ನುವ ಮಾತನ್ನು ಹೇಳಿದ್ದೆ. ಆದುದರಿಂದ ನಾನು ಇವತ್ತಿನ ಬಜೆಟ್ ಬಗ್ಗೆ ನಾನು ವಿವರಕ್ಕೆ ಹೋಗಲಿಲ್ಲ. ಏಕೆಂದರೆ. ಅದರಿಂದ ಏನು ಉಪಯೋಗವಾಗುವುದಿಲ್ಲ. ಹಿಂದೆ ಏನು ಬಜೆಟ್ ಆಯಿತು ಅದನ್ನು ಮಾತ್ರ ಹೇಳಿದೆ. ಇಷ್ಟು ಹೇಳಿ ಸಮಯ ಕೊಟ್ಟ ತಮಗೆ ವಂದಿಸಿ. ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಈಗ ಪ್ರಶ್ನೋತ್ತರ.